ಅಚಲ

ಮೇ 2001

ತಿಂಗಳ ಪತ್ರಿಕೆ

ಒಳಗೇನಿದೆ ?

- ಭೂಪಾಲದ ಬೇಗಂಮರು
- ಉದ್ಯಾನ ನಗರಿ ಕುಡುಕರ ನಗರಿಯಾಗಬೇಕೇ
- ಜಾಗತೀಕರಣದ ಸಂಸ್ಕೃತಿ
- ಪೋಷಕರೇ ಎಚ್ಚರವಾಗಿರಿ

ಜಾಗೃತಿ ಮಹಿಳಾ ಅಧ್ಯಯನ ಕೇಂದ್ರ, ಬೆಂಗಳೂರು

ಅಚಲ

ಸಂಪುಟ - 16 ಸಂಚಿಕೆ - 4-5

ಸಂಪಾದಕ ಮಂಡಲಿ

ಎನ್. ಗಾಯತ್ರಿ
ನೇಮಿಚಂದ್ರ, ದೇವಿ,
ಬಿ. ಎನ್. ಸುಮಿತ್ರಾಬಾಯಿ
ಶಾಂತಾನಾಗರಾಜ್
ಹೆಚ್. ಎಸ್: ಗೀತಾ
ಹೇಮಲತಾ ಮಹಿಷಿ

ಪ್ರಕಾಶಕರು
ಜಾಗೃತಿ ಮಹಿಳಾ ಅಧ್ಯಯನ ಕೇಂದ್ರ,
ಬೆಂಗಳೂರು

ಚಂದಾ ಹಣವನ್ನು ಚೆಕ್‌ನಲ್ಲಿ ಕಳುಹಿಸುವವರು ರೂ. 10 ಬ್ಯಾಂಕ್ ಕಮೀಷನ್ ಸೇರಿಸಿ ಕಳುಹಿಸಬೇಕು. ಎಂ. ಓ. ಫಾರ್ಮಿನ ಕೊನೆಯ ಭಾಗದಲ್ಲಿ ತಮ್ಮ ಹೆಸರು ವಿಳಾಸಗಳನ್ನು ಸ್ಪಷ್ಟವಾಗಿ ನಮೂದಿಸಬೇಕು.

ಬದಲಾದ ವಿಳಾಸವನ್ನು ದಯವಿಟ್ಟು ಬರೆದು ತಿಳಿಸಿ.

Achala - Edited by
Dr. N. Gayathri

Published by
Dr. G. Ramakrishna on
behalf of Jagruthi Mahila
Adhyayana Kendra

Printed at
Lipi Mudrana
Bangalore - 560 004

ಆತ್ಮೀಯರೇ,

ಕಳೆದ 15 ವರ್ಷಗಳಿಂದಲೂ ತಾವುಗಳು ಪ್ರೀತಿ, ಅಭಿಮಾನದಿಂದ ಅಚಲ ಪತ್ರಿಕೆಯನ್ನು ನಿಮ್ಮದಾಗಿಸಿಕೊಂಡು ಪೋಷಿಸುತ್ತಾ ಬಂದಿರುತ್ತೀರಿ. ಮಹಿಳಾ ಚಳುವಳಿಯ ಮತ್ತು ಸಂಶೋಧನೆಯ ಕ್ಷೇತ್ರದಲ್ಲಿ ಇನ್ನೂ ಬೆಟ್ಟದಷ್ಟು ಕೆಲಸವಾಗಬೇಕಿದೆ. ಈ ಮಹತ್ತರ ಕಾರ್ಯದಲ್ಲಿ ನಾವೆಲ್ಲರೂ ಒಟ್ಟಾಗಿ ಶ್ರಮಿಸಬೇಕಿದೆ. ನೀವೂ ಅಚಲ ಪತ್ರಿಕೆಯನ್ನು ನಿಮ್ಮ ವಿಚಾರಗಳ ವೇದಿಕೆಯನ್ನಾಗಿ ಮಾಡಿಕೊಳ್ಳಿ ಮತ್ತು ಪತ್ರಿಕೆಯ ಪ್ರಸಾರವನ್ನು ಹೆಚ್ಚಿಸುವಲ್ಲಿ ನೆರವಾಗಿ.

ಯಾವುದೇ ವಿವರಗಳನ್ನು ಬರೆಯದ ಚಂದಾಹಣವು ಹಲವಾರು ಎಂ.ಓ.ಗಳಲ್ಲಿ ನಮಗೆ ತಲುಪಿದೆ. ಚಂದಾದಾರರು ದಯವಿಟ್ಟು ಎಂ.ಓ. ಫಾರ್ಮಿನ ಹಿಂಭಾಗದಲ್ಲಿ ವಿಳಾಸವನ್ನು ಬರೆಯಿರಿ.

ಅಚಲದ ಚಂದಾ ವಿವರಗಳು ಹೀಗಿವೆ :

ವಾರ್ಷಿಕ ಚಂದಾ : ರೂ. 40/- (ವ್ಯಕ್ತಿಗಳಿಗೆ)
ರೂ. 75/- (ಸಂಸ್ಥೆಗಳಿಗೆ)
ಅಜೀವ ಚಂದಾ : ರೂ. 300/- (ವ್ಯಕ್ತಿಗಳಿಗೆ)
ರೂ. 400/- (ಸಂಸ್ಥೆಗಳಿಗೆ)

ಗಮನಿಸಿ

ಅಚಲ ವಿಳಾಸ ಬದಲಾಗಿದೆ

108, ಸ್ಕೈಲೈನ್ ಸುರಭಿ, 14-ಬಿ, ವಿದ್ಯಾಪೀಠ ರಸ್ತೆ
ಬನಶಂಕರಿ 3ನೇ ಹಂತ, ಬೆಂಗಳೂರು - 560 085

ಶಿಶು ಮಾರಾಟದ ಹಿಂದೆ.....

ಕರ್ನಾಟಕದ ಲಂಬಾಣಿ ತಾಂಡಗಳಿಂದ ಮಕ್ಕಳನ್ನು ಅಗ್ಗದ ಬೆಲೆಗೆ ಕೊಂಡು 'ದತ್ತು ತೆಗೆದು' ಕೊಳ್ಳುವ ನಾಟಕವಾಡಿ ವಿದೇಶಕ್ಕೆ ಹೆಣ್ಣು ಮಕ್ಕಳನ್ನು ಡಾಲರ್‌ಬೆಲೆಗೆ ಮಾರುತ್ತಿದ್ದ ಎನ್.ಜಿ.ಓಗಳ ಜಾಲ ಈಗ ಹತ್ತು ಹಲವು ಪ್ರಶ್ನೆಗಳನ್ನು ನಮ್ಮ ಮುಂದಿಡುತ್ತಿದೆ.

ಮಕ್ಕಳನ್ನು ಮಾರುವಂತಹ ಸ್ಥಿತಿಯೇ ಅಮಾನವೀಯವಾದುದೂ, ದುರದೃಷ್ಟಕರವೂ ಹೌದು. ಆದರೆ, ಅದರಲ್ಲೂ ಹೆಣ್ಣು ಮಗುವನ್ನು ಮಾರುವಂತಹ ಪರಿಸ್ಥಿತಿ ಸಮಾಜದ ಹೆಣ್ಣಿನ ಬಗೆಗಿನ ಹೀನ ದೃಷ್ಟಿಕೋನವನ್ನು ತೋರಿಸುತ್ತದೆ.

ಹೆಣ್ಣು ಮಕ್ಕಳನ್ನು ಕಾಲ ಕಸವಾಗಿ ಕಾಣುವ ಸಮಾಜದಲ್ಲಿ, ಅವುಗಳ ಮಾರಾಟ ಹೆಣ್ಣನ್ನು ಸರಕಾರಿ ಕಾಣುವ ಮಾದರಿಯ ಇನ್ನೊಂದು ಮುಖವಷ್ಟೇ. ಗುಲಬರ್ಗಾದಲ್ಲಿರುವ ಅನಾಥಾಶ್ರಮ ಜಾನ್ ಅಬ್ರಹಾಂ ಮೆಮೋರಿಯಲ್. ಭೆಥೂನೆ ಹೋಂನ ಶಾಖೆಯಿಂದ ಲಂಬಾಣಿ ತಾಂಡಾದ ಮತ್ತು ಇನ್ನಿತ್ತರ ಹೆಣ್ಣು ಮಕ್ಕಳನ್ನು ದತ್ತು ತೆಗೆದು ಕೊಂಡು ನಂತರ ಅವರನ್ನು ಡೆನ್ಮಾರ್ಕ, ಆಸ್ಟ್ರೇಲಿಯಾ, ಕೆನಡಾ ಸೇರಿದಂತೆ ವಿವಿಧ ದೇಶಗಳಿಗೆ ಎಲ್ಲ ನೀತಿ ನಿಯಮಾವಳಿಗಳನ್ನು ಮೀರಿ ರವಾನಿಸಲಾಗುತ್ತಿರುವ ಸಂಗತಿ ಅತ್ಯಂತ ಗಂಭೀರ ಸ್ವರೂಪದ್ದು. ಸ್ವಯಂ ಸೇವಾ ಸಂಘಗಳ ಅಧಿಕೃತತೆಯ ಬಗ್ಗೆ ಅವರ ಸಾಮಾಜಿಕ ಬದ್ಧತೆಯ ಬಗ್ಗೆ ಜನ ಅನುಮಾನಿಸುವಂತಾಗಿದೆ. ಇದು ಕೇವಲ ಒಂದು ರಾಜ್ಯದ ರಾಜಕೀಯವಾಗಿ ಉಳಿಯದೆ, ಅಂತರಾಷ್ಟ್ರೀಯ ವ್ಯಾಪಕ ಜಾಲ ಹೊಂದಿದ್ದು ಇದರಲ್ಲಿ ಗಣ್ಯವ್ಯಕ್ತಿಗಳೂ ಸೇರಿಕೊಂಡಿರುವುದು ಸಮಸ್ಯೆಯನ್ನು ಹೆಚ್ಚು ಸಂಕೀರ್ಣಗೊಳಿಸಿದೆ. ಚಿತ್ರನಟಿ ಅಮಲಾ ಈ ಸಂಸ್ಥೆಗೆ ಗೌರವಾಧ್ಯಕ್ಷರಾದರೂ ಈ ವಿಷಯದ ಬಗ್ಗೆ ಅಜ್ಞಾನ ವ್ಯಕ್ತಪಡಿಸುತ್ತಿರುವುದು ಎಲ್ಲರ ಅನುಮಾನಕ್ಕೆ ಹೆಚ್ಚು ಇಂಬು ಕೊಟ್ಟಂತಾಗುತ್ತದೆ.

ಆಂಧ್ರ - ಕರ್ನಾಟಕ ಗಡಿ ಪ್ರದೇಶದಲ್ಲಿ ನಡೆಯುತ್ತಿರುವ ಈ ಹೆಣ್ಣು ಶಿಶುಗಳ ಮಾರಾಟದ ದಂಧೆ ಎಂತಹವರನ್ನು ನಾಚಿಕೆ ಪಟ್ಟುಕೊಳ್ಳುವಂತೆ ಮಾಡುತ್ತದೆ. ಈ ಸಂಬಂಧವಾಗಿ ಸಿ.ಓ.ಡಿ. ತನಿಖೆ ನಡೆದು ಹಲವಾರು ಮಂದಿ ಬಂಧಿತರಾಗಿರುವುದು ನಿಜವಾದರೂ, ಎಲ್ಲ ಸತ್ಯಗಳನ್ನು ಶೋಧಿಸಬಲ್ಲ, ರಾಜಕೀಯ ದುರಾಗ್ರಹಗಳನ್ನು ಎದುರಿಸಬಲ್ಲ ಸಾಮರ್ಥ್ಯ ಇಂದು ಈ ತನಿಖೆಗಳಿಗೆ ಇವೆಯೇ? ಪ್ರತಿಯೊಂದು ಅಪರಾಧಗಳು ಬೆಳಕಿಗೆ ಬಂದು ಅವುಗಳಿಗೆ ಶಿಕ್ಷೆಯಾಗುವುದು - ಒಂದು ರೀತಿಯಲ್ಲಿ ಅಪರಾಧದ ಸಂಖ್ಯೆಯನ್ನು ಕಡಿಮೆ ಮಾಡುವ ಪ್ರಕ್ರಿಯೆಯಾಗಬೇಕು. ಈ ನಿಟ್ಟಿನಲ್ಲಿ ಕರ್ನಾಟಕ ಮತ್ತು ಆಂಧ್ರ ಸರ್ಕಾರ ಅತ್ಯಂತ ಕಟ್ಟು ನಿಟ್ಟಿನ ಕ್ರಮಗಳನ್ನು ಅನುಸರಿಸಲೇ ಬೇಕು. ಇಲ್ಲವಾದರೆ ಜನರ ವಿಶ್ವಾಸವನ್ನು ಕಳೆದು ಕೊಂಡಂತೆಯೇ, ಈ ಸಂಬಂದದಲ್ಲಿ ಅಪರಾಧಿಗಳು ಪ್ರಭಾವೀಯುತ ರಾಜಕಾರಣಿಗಳ ನೆರವಿನಿಂದ ತಲೆತಪ್ಪಿಸಿಕೊಳ್ಳದಂತೆ ನೋಡಿಕೊಳ್ಳುಬೇಕು.

ರಾಷ್ಟ್ರೀಯ ಮಹಿಳಾ ಆಯೋಗವು ಕೆಲವು ಮಹಿಳಾ ಸಂಘಟನೆಗಳ ಮನವಿಗೆ ಓಗೊಟ್ಟು ಈ ಸ್ಥಳಕ್ಕೆ ಬೇಟಿ ನೀಡಿ ವಸ್ತು ಸ್ಥಿತಿಯನ್ನು ಅಭ್ಯಸಿಸಿ ತನಿಖೆಯನ್ನು ಒತ್ತಾಯಿಸಿರುವ ಹಿನ್ನೆಲೆಯಲ್ಲಿ ನಮ್ಮ ರಾಜ್ಯ ಸರ್ಕಾರದ ಮಹಿಳಾ ಕಲ್ಯಾಣ ಸಮಿತಿಗಳು ನಿದ್ದೆ ಮಾಡುತ್ತಿವೆಯೇ ಎಂಬ ಅನುಮಾನ ಮೂಡುತ್ತದೆ. ಕಾಂಗ್ರೆಸ್ ಸರ್ಕಾರ ಅಧಿಕಾರ ಬಂದು ಒಂದು ವರ್ಷಗಳಿಗೂ ಹೆಚ್ಚು ಸಮಯವಾದರೂ ಇಲ್ಲಿ ಮಹಿಳಾ ಆಯೋಗವೇ ಇನ್ನು ರಚಿತವಾಗಿಲ್ಲ. ಅಲಂಕಾರಕ್ಕೆಂದು ಮಾಡಿರುವ ಮಹಿಳಾ ಟಾಸ್ಕ್ ಫೋರ್ಸ್‌ಗೆ ಇಂತಹ ವಿಷಯಗಳು ಮುಖ್ಯವಾಗುವುದೇ ಇಲ್ಲ. ಈ ಸಂದರ್ಭದಲ್ಲಾದರೂ ರಾಜ್ಯದ ಮಹಿಳಾ ಆಯೋಗವನ್ನು ರಚಿಸಬೇಕು ಮತ್ತು ಯಶಸ್ವಿಯಾಗಿ ಕಾರ್ಯ ನಿರ್ವಹಿಸುವಂತೆ ಮಾಡಬೇಕೆಂದು ಸರ್ಕಾರವನ್ನು ಒತ್ತಾಯಿಸಬೇಕು. ಆಗ ಇನ್ನಷ್ಟು ಮಹಿಳಾ ದತ್ತು ಕೇಂದ್ರಗಳ ನಿಜಸ್ವರೂಪಗಳು ಬಯಲಾಗುತ್ತವೆ.

- ಎನ್. ಗಾಯತ್ರಿ

ಜಾಗತೀಕರಣದ ಸಂಸ್ಕೃತಿ

ಇಂದು ನಾವು ದಿನ ನಿತ್ಯ ಮಾಡುವ ಎಲ್ಲ ಕೆಲಸಗಳಲ್ಲೂ ಜಾಗತೀಕರಣದ ಪ್ರಭಾವವಿದೆಯೆಂಬುದರಲ್ಲಿ ಎರಡು ಮಾತಿಲ್ಲ. ನಾವು ತಿನ್ನುವ, ಕುಡಿಯುವ, ವೇಷ ಧರಿಸುವ, ಕೊನೆಗೆ ಯೋಚಿಸುವ ರೀತಿಯನ್ನೂ ಜಾಗತೀಕರಣ ಬದಲಾಯಿಸಿದೆ. ನ್ಯೂಯಾರ್ಕ್ ಅಥವಾ ಲಂಡನ್, ಇಲ್ಲವೇ ಶಾರ್ಜಾ ಹಾಗೂ ಬೀಜಿಂಗ್‌ನಲ್ಲಿ ನಡೆಯುವ ಸಂಗತಿಗಳನ್ನು ಮನೆಯ ಆರಾಮ ಕುರ್ಚಿಯಲ್ಲೆ ಕುಳಿತೇ ದೂರದರ್ಶನದ ಸ್ಯಾಟ್‌ಲೈಟ್ ನೆಟ್‌ವರ್ಕ್‌ನಲ್ಲಿ ನೋಡುತ್ತೇವೆ. ಹಾಲಿವುಡ್‌ನ ಚಿತ್ರಗಳು ನಮ್ಮದೇ ಮಾತೃಭಾಷೆಗಳಲ್ಲಿ ಡಬ್ ಆಗಿ ಬಿತ್ತರವಾಗುವುದನ್ನು ನೋಡುತ್ತಿದ್ದೇವೆ. ನಾವು ವಾಸಿಸುತ್ತಿರುವ ಬಡಾವಣೆಗಳಲ್ಲಿ, ಅಲ್ಲಿರುವ ಶಾಲಾ ಕಾಲೇಜುಗಳಲ್ಲಿ ಸೌಂದರ್ಯಸ್ಪರ್ಧೆಗಳು ನಡೆಯುವುದನ್ನೂ ನೋಡುತ್ತಿದ್ದೇವೆ. ನಮ್ಮ ಮಕ್ಕಳು ಎರಡು ನಿಮಿಷದ ನೂಡಲ್ಸ್, ಹ್ಯಾಂಬರ್ಗ್, ಪಿಜ್ಜಾ, ಟಿನ್‌ಗಳಲ್ಲಿನ ಪೆಪ್ಸಿ ಕೋಲಾಗಳನ್ನು ಒತ್ತಾಯಿಸಿ ಕೇಳುವುದೂ ಇದೆ.

ಇಂದು ಜಗತ್ತಿನ ಯಾವುದೇ ಭಾಗಕ್ಕೆ ಹೋದರೂ ಮನುಷ್ಯನ ನಾಗರೀಕತೆಯನ್ನು ಸೂಚಿಸುವ ಫಲಕಗಳೆಂದರೆ ಟಿ.ವಿ. ಆಂಟೆನಾಗಳು. ನಮ್ಮ ದೂರವಾಣಿ ವ್ಯವಸ್ಥೆಯು ಇಡೀ ಭೂಗೋಳವನ್ನು ಒಂದೆಂಬಂತೆ ಸಂಪರ್ಕ ಸೇತುವೆಯಾಗಿ ಕೆಲಸ ಮಾಡುತ್ತಿದೆ. ಇಂಟರ್ ನೆಟ್ ಮೂಲಕ ಇಂದು ಜನರು ಅತ್ಯಂತ ಕಡಿಮೆ ಖರ್ಚಿನಲ್ಲಿ ಜಗತ್ತಿನ ಉದ್ದಗಲಕ್ಕೂ ವ್ಯವಹರಿಸಬಲ್ಲವರಾಗಿದ್ದಾರೆ, ಮಾಹಿತಿ ಪಡೆಯಬಲ್ಲರು, ಅಚ್ಚುಕಟ್ಟಾಗಿ ಕಾರ್ಯ ನಿರ್ವಹಿಸಬಲ್ಲರು. ಮಿಲಿಯನ್ ಗಟ್ಟಲೆ ಡಾಲರ್ ಹಣವನ್ನು ಕೆಲವೇ ನಿಮಿಷಗಳಲ್ಲಿ ಕಂಪ್ಯೂಟರ್ ನೆಟ್‌ವರ್ಕ್ ಮೂಲಕ ಜಗತ್ತಿನ ಯಾವ ಮೂಲೆಗಾದರೂ ರವಾನಿಸಬಹುದು. ಬ್ಯಾಂಕ್, ಶೇರು ಪೇಟೆ ಮತ್ತು ಇತರ ಹಣಕಾಸು ಸಂಸ್ಥೆಗಳನ್ನು ಸಂಪರ್ಕಿಸಲು ಕಂಪ್ಯೂಟರ್ ಅಗತ್ಯವಾಗಿ ಬೇಕು.

ಜಾಗತೀಕರಣ ಭಾರತೀಯ ಸಂಸ್ಕೃತಿಯನ್ನು ಬದಲಾಯಿಸುತ್ತಿದೆ. ಉದಾಹರಣೆಗೆ ಬೆಳ್ಳಿತೆರೆಯ ಜಗತ್ತನ್ನೇ ಗಮನಿಸಿ. ಹಾಲಿವುಡ್‌ನ ಚಿತ್ರಗಳ ಅನುಭವದಿಂದ ನಮ್ಮ ಚಿತ್ರಗಳೂ ತಾಂತ್ರಿಕ ನೈಪುಣ್ಯತೆಯಲ್ಲಿ ಯಶಸ್ಸನ್ನು ಸಾಧಿಸಿವೆ. ಅದರ ಪರಿಣಾಮವಾಗಿ ಕ್ರೌರ್ಯ, ಹಿಂಸೆಯನ್ನು ಅದರ ಎಲ್ಲಾ ಮುಖಗಳೂ ಅಚ್ಚೊತ್ತುವಂತೆ ನಮ್ಮ ಸಿನಿಮಾಗಳು ಚಿತ್ರಿಸಬಲ್ಲವು. ಮುರಿದ ಕೈಕಾಲುಗಳು, ಗುಂಡಿನೇಟಿನ ಚಿಮ್ಮುವ ರಕ್ತದ ಹೊಳೆ, ಛೂರು ಚೂರಾದ ಮೆದುಳು, ಎಲ್ಲಕ್ಕೂ ತಾಂತ್ರಿಕ ನೈಪುಣ್ಯತೆಯ ಸ್ಪರ್ಶ. ನಮ್ಮ ಚಿತ್ರಗಳಲ್ಲಿ ಕಾಮ ವಿಜೃಂಭಿಸುತ್ತಿದೆ. ನಮ್ಮ ನಾಯಕ ಮತ್ತು ನಾಯಕಿಯರು ಸೌಂದರ್ಯ ಸ್ಪರ್ಧೆಯ ಅಂತರರಾಷ್ಟ್ರೀಯ ಮಾಡೆಲ್‌ಗಳಂತೆ ಮೆರೆಯುತ್ತಾರೆ. ಚಿತ್ರದ ಹಾಡಿನ ದೃಶ್ಯಾವಳಿಗಳು ಪಾಶ್ಚಾತ್ಯ ಸಂಗೀತ, ನೃತ್ಯವನ್ನು ನೆನಪಿಸುತ್ತವೆ. ವಿದೇಶೀ ನೆಲದಲ್ಲಿಯೇ ಹೆಚ್ಚು ಚಿತ್ರಗಳು ಚಿತ್ರೀಕರಣಕ್ಕೊಳಗಾಗುತ್ತಿವೆ.

ಈ ಎಲ್ಲಾ ಬದಲಾವಣೆಗಳಿಗೆ ಹಲವಾರು ಮಂದಿ ಮರುಗುತ್ತಾರೆ. ಭಾರತೀಯ ಸಂಸ್ಕೃತಿ ಇದರಿಂದ ನಶಿಸಿ ಹೋಗುತ್ತಿದೆಯೆಂದು ಬೊಬ್ಬೆಯಿಡುವ ಮಂದಿಗೇನೂ ಕಡಿಮೆಯಿಲ್ಲ. ಭಾರತೀಯ ಸಂಸ್ಕೃತಿ, ಮೌಲ್ಯಗಳು, ನಮ್ಮ ಸಂಪ್ರದಾಯ-ಎಲ್ಲವೂ ಹಾಳಾಗಿದೆಯೆಂಬ ನಂಬಿಕೆ ಇವರದು. ಜಾಗತೀಕರಣವು ನಮ್ಮ ಭಾರತೀಯ ಸಂಸ್ಕೃತಿಯನ್ನು ಹಾಳು ಮಾಡುತ್ತಿದೆಯೆಂಬುದು ಇವರ ನಂಬಿಕೆಯಾದರೆ, 'ಸಂಸ್ಕೃತಿ'ಯೆಂಬುದು ಏಕಾಕೃತಿಯ ಪರಿಕಲ್ಪನೆಯೇ? ಹಾಗೆಯೇ ಎಲ್ಲ ವಿದೇಶೀ ಪ್ರಭಾವ, ಪರಿಣಾಮಗಳು ಹಾನಿಕಾರಕವೇ ಎಂಬ ಪ್ರಶ್ನೆ ನಮ್ಮ ಮುಂದೆ ಏಳುತ್ತದೆ. ಆದರೆ ಇದು ಸತ್ಯವಲ್ಲ. ಶುದ್ಧವಾದ 'ಸಂಸ್ಕೃತಿ'ಯೆಂಬ ಪರಿಕಲ್ಪನೆಯೇ ಸತ್ಯಕ್ಕೆ ದೂರವಾದದ್ದು. ಭಾರತದ ನೆಲದಲ್ಲಂತೂ ವೈವಿಧ್ಯಮಯವಾದ ಸಾಂಸ್ಕೃತಿಕ ಪ್ರಭೇದಗಳಿವೆ. ಈ ಎಲ್ಲ ಸಾಂಸ್ಕೃತಿಕ ವೈವಿಧ್ಯಗಳು ಪರಸ್ಪರ ಸಂಬಂಧ ಹೊಂದಿವೆ; ಪರಸ್ಪರ ಕೊಡುಕೊಳುಗೆಯ ಸಂಬಂಧದಿಂದ ಕಾರ್ಯನಿರ್ವಹಿಸುತ್ತಿವೆ. ಮನುಷ್ಯನ ನಾಗರೀಕತೆಯ ಕಾಲದಿಂದ ಸುಂದರ ವಸ್ತುಗಳು ನಮಗೆ ದೊರೆತಿರುವುದು ಭಾರತೀಯ ರೈಲ್ವೆಯಿಂದ, ಮುದ್ರಣ, ಪ್ಯಾಂಟ್ ಶರ್ಟುಗಳು, ಸಿನಿಮಾ, ರೇಡಿಯೋ, ಪ್ರಜಾಪ್ರಭುತ್ವ ಮತ್ತು ಇನ್ನಿತರ ಸಂಗತಿಗಳಿಂದ. 'ಭಾರತೀಯ ಸಂಸ್ಕೃತಿ'ಯ ವಲಯದಲ್ಲಿಯೇ ನಮಗೆ ಸಿಗುವಂತಹ ಪ್ರತಿಗಾಮಿಗಳು ಇಡೀ ವಿಶ್ವದ ಬೇರೆಡೆಯೆಲ್ಲಿಯೂ ಸಿಗದೆ ಇರದು. ಪರಿಸ್ಥಿತಿ ಹೀಗಿರುವಾಗ, ಜಾಗತೀಕರಣದಿಂದ ನಮ್ಮ ಸಂಸ್ಕೃತಿ ಹಾಳಾಯಿತು, ಎಂದು ಬೊಬ್ಬೆಯಿಡುವುದು ಎಷ್ಟು ಸರಿ? -ಎಂದೆನಿಸಬಹುದು.

ಜಾಗತೀಕರಣವನ್ನು ಎಲ್ಲ ಪ್ರಜ್ಞಾವಂತರು ವಿರೋಧಿಸುತ್ತಿದ್ದರೆ, ಅದಕ್ಕೆ ಮುಖ್ಯ ಕಾರಣ, ಅದು ಪಾಶ್ಚಾತ್ಯರಿಂದ ಕಡತಂದದ್ದು ಎಂದಲ್ಲ. ಕಲುಷಿತಗೊಳ್ಳದ 'ಸಂಸ್ಕೃತಿ'ಯೆಂಬುದೊಂದು ಇರಲು ಸಾಧ್ಯ ಎಂಬುದರಲ್ಲೇ ವಿಶ್ವಾಸವಿರದ ನಾವು ಸಾಂಸ್ಕೃತಿಕ ಅಂಶಗಳು ಯಾವುದೇ ಮೂಲೆಯಿಂದ ಬಂದರೂ ಸ್ವೀಕರಿಸಲು ಸಿದ್ಧ. ಆದರೆ ಭಾರತೀಯರು ಸಂಪೂರ್ಣವಾಗಿ ಆಮದಾದ ವಿಷಯಗಳ ಮೇಲಷ್ಟೇ ಬದುಕಿರುತ್ತಾನೆ, ಎಂಬುದನ್ನು ಒಪ್ಪಲು ಸಿದ್ಧರಿಲ್ಲ.

★

> ಜಾಗತೀಕರಣವನ್ನು ನಾವು ವಿರೋಧಿಸುವುದಕ್ಕೆ ಮುಖ್ಯಕಾರಣ,. ಅದು ಸಾಮ್ರಾಜ್ಯಶಾಹಿಗಳ ಸಂಸ್ಕೃತಿಯ ಪ್ರಚಾರಕ. ಬಂಡವಾಳ ಶಾಹಿ ಜಗತ್ತಿನ ಅಗತ್ಯದಂತೆ ಅಸಮಾನತೆಯ, ಶೋಷಕ. ಶ್ರೇಣೀಕೃತ ಸಮಾಜವನ್ನು ಬೆಂಬಲಿಸುತ್ತದೆ. ಅದಕ್ಕೆ ಅಗತ್ಯವಾದ ಸಂಸ್ಕೃತಿಯನ್ನು ಹರಡುತ್ತದೆ.

ಉದ್ಯಾನನಗರಿ ಕುಡುಕರ ನಗರಿಯಾಗಬೇಕೆ?

ಇಂದು ನೀರಾ ವಿರುದ್ಧದ ಬೀರಿನ ಒತ್ತಾಯದ ಚಳುವಳಿ ನಮ್ಮ ರಾಜ್ಯದಲ್ಲಿ ಭರಾಟೆಯಿಂದ ನಡೆಯುತ್ತಿದೆ. ಈ ಚಳುವಳಿಯು ಜನತಾ ಆಂದೋಳನವಲ್ಲ. ಜನ ಪ್ರತಿನಿಧಿಗಳಾಗಿ ಅಧಿಕಾರದ ಗದ್ದುಗೆಯೇರಿ ಕುಳಿತ ಮಂತ್ರಿ ಮಹೋದಯರು ಮದ್ಯದ ಲಾಬಿಗೆ ಮಣಿದು ಶರಣಾಗಿ ನಡೆಸುತ್ತಿರುವ ಅನೈತಿಕ ಚಳುವಳಿ. ಹಣ, ಅಧಿಕಾರದ ಅಮಲಿನಲ್ಲಿ ಮದ್ಯಪಾನದ ಮಾರುಕಟ್ಟೆಯನ್ನು ವಿಸ್ತರಿಸುವ ಕ್ರಮವಾಗಿ ಬಡರೈತನ ನೀರಾ ಕಟ್ಟುವಿಕೆಯನ್ನು ಸದೆ ಬಡಿಯುತ್ತಲೇ ಬಡವರ, ಹೆಂಗಸರ, ಮಕ್ಕಳ ಮೇಲೆ ದೌರ್ಜನ್ಯವೆಸಗಿ ರಾಜ್ಯ ಸರ್ಕಾರ ತನ್ನ ಅಮಾನವೀಯವಾದ ಹಾಗೆಯೇ ವಿಕೃತವಾದ ಮುಖವನ್ನೂ ಬಯಲು ಮಾಡಿದೆ.

'ಓದುವುದು ಕಡಿಮೆ ಮಾಡಿ, ಕುಡಿಯುವುದು ಜಾಸ್ತಿ ಮಾಡಿ' ಎಂಬ ರಾಜನೀತಿಯನ್ನು ಅನುಷ್ಠಾನಕ್ಕೆ ತರಲು ಹೊರಟ ನಮ್ಮ ರಾಜ್ಯದ ಮಾನ್ಯ ಮುಖ್ಯ ಮಂತ್ರಿಗಳು ಪುಸ್ತಕದ ಮೇಲೆ ತೆರಿಗೆ ಹಾಕಲು ಹೊರಟರು; ಶಾಲೆಗಳನ್ನು ಮುಚ್ಚುವುದಾಗಿ ಘೋಷಿಸಿದರು. ನಂತರ ಬೀದಿ ಬೀದಿಗಳಲ್ಲಿ ಬೀರು ದೊರಕುವ ವ್ಯವಸ್ಥೆಯನ್ನು ನಡೆಸುವ ಮಹಾನ್ ಯೋಜನೆಯನ್ನು ಪ್ರಕಟಿಸಿದರು. ಅದನ್ನು ಸಮರ್ಥಿಸಿಕೊಳ್ಳಲು ಸೈದ್ಧಾಂತಿಕ ವಿವರಣೆಯನ್ನೂ ತಯಾರಿಸಿದರು. ಕೋಕಾಕೋಲಾ, ಪೆಪ್ಸಿಯಂತೆ ಬಿಯರ್ ಕೂಡ ಒಂದು ಸರ್ವರೂ ಅಪೇಕ್ಷಿಸಬಹುದಾದ ಪಾನೀಯವೆಂದು, ಕರ್ನಾಟಕವನ್ನು, ಅದರಲ್ಲೂ ಬೆಂಗಳೂರನ್ನು ಕುಡುಕರ ನಗರಿಯಾಗಿಸಹೊರಟರು. ಆದರೆ ಕರ್ನಾಟಕದ ಜನತೆ ಈ ರಾಜ ಶಾಸನದ ವಿರುದ್ಧ ಸಿಡಿದೆದ್ದು ತಮ್ಮ ವಿರೋಧವನ್ನು ಪ್ರಕಟಿಸಿದ ಯಶಸ್ಸು ಕಂಡದ್ದು ಈಗ ಎಲ್ಲರಿಗೂ ತಿಳಿದಿರುವ ವಿಚಾರ.

ತೆಂಗಿನ ಬೆಳೆಗಾರ ಸಮುದಾಯ ರೋಗ ಪೀಡಿತ ತೆಂಗಿನ ಬೆಳೆಯಿಂದಾಗಿ ಈಗಾಗಲೇ ನೆಲಕಚ್ಚಿದೆ. ಹೀಗಿರುವಾಗ ತೆಂಗಿನ ನುಸಿರೋಗಕ್ಕೆ ಮದ್ದಾಗಿ ನೀರಾ ಇಳಿಸುವ ಪರಿಹಾರ ಕಂಡುಕೊಂಡ ಅವರ ಕ್ರಮವನ್ನು ಸರ್ಕಾರ ತಡೆಯಲು ಕಠಿಣ ಕ್ರಮ ಕೈಗೊಂಡಿದೆ. ನೀರಾ ಇಳಿಸುವುದನ್ನು ಕಾನೂನು ಬಾಹಿರವೆಂದು ಘೋಷಿಸಿಕೊಂಡಿರುವ ಕರ್ನಾಟಕ ರಾಜ್ಯಸರ್ಕಾರ ಇದನ್ನು ತಡೆಗಟ್ಟಲು ಹುಚ್ಚು ಹುಚ್ಚಾಗಿ ವರ್ತಿಸಿದೆ. ನೀರಾ ಇಳಿಸಿರುವ ರೈತರ ತೋಟಗಳಿಗೆ ನುಗ್ಗಿ ಕಾನೂನಿನ ಸಂರಕ್ಷಣೆಯ ಹೆಸರಿನಲ್ಲಿ ತೆಂಗಿನ ಹೊಂಬಾಳೆಗಳನ್ನೆಲ್ಲಾ ನಾಶ ಮಾಡಿದ್ದಾರೆ. ಅಷ್ಟೇ ಅಲ್ಲದೆ ನೀರಾ ಚಳುವಳಿಯಲ್ಲಿ ಭಾಗವಹಿಸಿರುವ ಕೃಷಿ ಕೆಲಸಗಾರರು ಮತ್ತು ಕಾರ್ಯಕರ್ತರನ್ನು ಚೆನ್ನಾಗಿ ಥಳಿಸಿ ಬಂಧಿಸಿರುವುದಲ್ಲದೆ ಈ ಗ್ರಾಮಗಳಲ್ಲಿ ಎರಡು ವರ್ಷಗಳ ಹಿಂದೆ ಬಾಗೂರು ನವಿಲೆಯಲ್ಲಿ ನಡೆಸಿದ ಗೂಂಡಾಗಿರಿಯನ್ನೇ ಮತ್ತೆ ಮರುಕಳಿಸಿದ್ದಾರೆ. ಆಗ ನಡೆದ ಪೋಲೀಸ್ ದೌರ್ಜನ್ಯವನ್ನು ಖಂಡಿಸಿದ್ದ ಇಂದಿನ ಗೃಹಮಂತ್ರಿ ಮಲ್ಲಿಕಾರ್ಜುನ ಖರ್ಗೆಯವರಿಗೆ ಇಂದು ರೈತರ ಮೇಲೆ ಪೋಲೀಸರಿಂದ ನಡೆಯುತ್ತಿರುವ ಹಲ್ಲೆ ದೌರ್ಜನ್ಯವೆನಿಸುತ್ತಿಲ್ಲ.

ಇಂದು ಹಾಸನ ಜಿಲ್ಲೆಯ ಬಿಸಲೆಹಳ್ಳಿಯಲ್ಲಿ ಮರುಕಳಿಸಿರುವ ಬಾಗೂರು-ನವಿಲೆಯ ಚರಿತ್ರೆಯ ಖಂಡನಾರ್ಹ ಸಂಗತಿಯಾಗಿದೆ. ಗ್ರಾಮಗಳಿಗೆ ನುಗ್ಗಿ ಪುರುಷರನ್ನು ಬಂಧಿಸಿ ಮಹಿಳೆಯರು ಮೇಲೆ ಹಲ್ಲೆ ನಡೆಸಿ ಒಂದು ಭಯಾನಕ ವಾತಾವರಣವನ್ನು ಸೃಷ್ಟಿಸಿರುವ ಪೋಲೀಸರು ಮತ್ತು ಅವರ ಕೃತ್ಯವನ್ನು ಬೆಂಬಲಿಸುತ್ತಿರುವ ಅಧಿಕಾರಸ್ಥರು ಯಾರ ಹಿತವನ್ನು ಕಾಯಲು ಹೊರಟಿದ್ದಾರೆ, ಎಂಬುದು ಸೂರ್ಯಸ್ಪಷ್ಟವಾಗಿದೆ. ನೀರಾ ಚಳುವಳಿ ಮತ್ತು ಸತ್ಯಾಗ್ರಹಗಳನ್ನು ಹತ್ತಿಕ್ಕುವ ನೆಪದಲ್ಲಿ, ಕಾನೂನು ಶಾಂತಿಪಾಲನೆಯ ಸೋಗಿನಲ್ಲಿ ಗ್ರಾಮಗಳಿಗೆ ನುಗ್ಗಿ ಹೆಂಗಸರ ಮೇಲೆ ಲಾಠಿ ಪ್ರಹಾರ ಮಾಡಿ ದೌರ್ಜನ್ಯ ನಡೆಸಿರುವ ಪೋಲೀಸರ ಮೇಲೆ ಶಿಸ್ತಿನ ಕ್ರಮ ತೆಗೆದುಕೊಳ್ಳಬೇಕಾದದ್ದು ಅಗತ್ಯ.

'ನೀರಾ' ನಿಷೇಧಿಸುವುದು ಬೀರ್ ಬೆಂಬಲಿಸುವುದು ಎರಡಕ್ಕೂ ನಿಕಟವಾದ ಸಂಬಂಧವಿದೆ. ಬೀರ್ ಮತ್ತು ವೈನ್‌ಗಳನ್ನು ಕಿರಾಣಿ ಅಂಗಡಿಗಳ ಮೂಲಕ ಸರಬರಾಜು ಮಾಡಿ ಆ ಮಾರುಕಟ್ಟೆಯನ್ನು ಹಿಗ್ಗಿಸುವ ಪ್ರಯತ್ನ ಮದ್ಯದ ದೊರೆಗಳನ್ನು ಸಂಪ್ರೀತಗೊಳಿಸುವ ಕಾರ್ಯಕ್ರಮವೇ ಆಗಿದೆ. ದೇಶೀಯ ಅಂತಃಸತ್ವವನ್ನು ಧ್ವಂಸಗೊಳಿಸಿ ಅಂತರರಾಷ್ಟ್ರೀಯ ಮಾರುಕಟ್ಟೆಗೆ ಬಾಗಿಲು ತೆರೆದು ರತ್ನಗಂಬಳಿಯನ್ನು ಹಾಸಿ ಸಿದ್ಧವಾಗಿರುವ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ತಮ್ಮ ರಾಜ್ಯಗಳಲ್ಲೆಲ್ಲಾ ಇಂತಹ ಏನಾದರೂ ದೊಂಬರಾಟವನ್ನು ನಡೆಸುತ್ತಲೇ ಇವೆ. ಇತ್ತೀಚೆಗೆ 715 ವಸ್ತುಗಳ ಮೇಲೆ ಆಮದು ಶುಲ್ಕ ತೆಗೆದುಹಾಕಿದ ಕೇಂದ್ರ ಸರ್ಕಾರದ ಕ್ರಮದಿಂದ ಎಲ್ಲಾ ಬ್ರ್ಯಾಂಡಿನ ವಿದೇಶೀ ಮದ್ಯಗಳು ಈಗ ಭಾರತದಲ್ಲಿ ಗ್ರಾಹಕರಿಗೆ ಸುಲಭವಾಗಿ ಲಭ್ಯವಾಗಲಿವೆ. ಈಗ ಭಾರತೀಯ ಗ್ರಾಹಕರಲ್ಲಿ ಇಂತಹ ವಸ್ತುಗಳಿಗೆ ಅಭಿರುಚಿಯನ್ನು ಬೆಳೆಸಿ ಗ್ರಾಹಕರ ವಲಯಗಳನ್ನು ವಿಸ್ತರಿಸಬೇಕಾದ ಜವಾಬ್ದಾರಿಯನ್ನು ರಾಜ್ಯ ಸರ್ಕಾರ ತಾನೇ ಕೈಗೆತ್ತಿಕೊಂಡಿದೆ! ಈ ಮಹತ್ ಕೈಂಕರ್ಯದಲ್ಲಿ ಕರ್ನಾಟಕದ ಮುಖ್ಯಮಂತ್ರಿಗಳು ವಿಶೇಷ ಒಲವು ತೋರಿ ಮುಂದಾಗಿದ್ದಾರೆ!

ಗಾಂಧೀಜಿಯವರು "ಕುಡಿತವು ಕಳ್ಳತನ, ವ್ಯಭಿಚಾರಗಳಿಗಿಂತಲೂ ಅತ್ಯಂತ ಹೀನವಾದದ್ದು" ಎಂದು ತಿಳಿಸಿದ್ದರು. ಅಲ್ಲದೇ "ನಾನು ಭಾರತ ದೇಶದ ಒಂದೇ ಒಂದು ದಿನ ಸರ್ವಾಧಿಕಾರಿಯಾಗಿ ಅಧಿಕಾರ ವಹಿಸಿಕೊಂಡರೆ ಮದ್ಯದಿಂದ ಬರಲಿರುವ ಆದಾಯದ ಬಗ್ಗೆ ಯೋಚಿಸದೇ,

ವಿದ್ಯಾಸಂಸ್ಥೆಗಳನ್ನು ಪೂರ್ಣವಾಗಿ ಮುಚ್ಚಿ ಶಿಕ್ಷಣ ನಿಂತರೂ ಚಿಂತಿಸದೆ ಭಾರತದಾದ್ಯಂತ ಸಂಪೂರ್ಣ ಪಾನ ನಿರೋಧವನ್ನು ಜಾರಿಗೆ ತರುತ್ತೇನೆ'' ಎಂದು ಪಾನ ನಿರೋಧ ನೀತಿಗೆ ಗಾಂಧೀಜಿಯವರು ಸಮರ್ಥನೆ ನೀಡಿದ್ದರು.

ಇಂದು ಅದೇ ಗಾಂಧೀಜಿ ಸ್ಥಾಪಿಸಿದ ಕಾಂಗ್ರೆಸ್ ಪಕ್ಷದ ಮುಖ್ಯಮಂತ್ರಿಯೊಬ್ಬರು ಬೀದಿ ಬೀದಿಯಲ್ಲಿ ದಿನಸಿ ಅಂಗಡಿಗಳಲ್ಲಿ ಬೀರ್, ವೈನ್ ದೊರಕುವ ವ್ಯವಸ್ಥೆ ಮಾಡಹೊರಡಿದ್ದಾರೆ. ಜನ ಪ್ರತಿನಿಧಿಯಾದ ಮುಖ್ಯ ಮಂತ್ರಿಗಳು ಈ ಮಹಾತ್ಕಾರ್ಯ ಮಾಡಹೊರಟಿರುವುದು ಜನಗಳ ಅಪೇಕ್ಷೆಯ ಮೇರೆಗಾಗಲೀ, ಜನಗಳ ಹಿತಕಾಯುವುದಕ್ಕಾಗಲೀ ಅಲ್ಲ. ಬದಲಿಗೆ ರಾಜ್ಯದ ಬೊಕ್ಕಸಕ್ಕೆ ನೆರವಾಗುವ ಮದ್ಯದೊರೆಗಳ ಒತ್ತಾಯದಿಂದ, ಇಲ್ಲವೇ ಅವರನ್ನು ಸಂಪ್ರೀತಗೊಳಿಸಲು. ಇದೆಂತಹ ಪ್ರಜಾಪ್ರಭುತ್ವ?

ರಾಜ್ಯದ ಐನೂರು ಅಂಗಡಿಗಳಿಗೆ ಬೀರ್ ಮಾರಾಟಕ್ಕೆ ಪರವಾನಗಿ ಕೊಡಬೇಕೆಂದಿದ್ದ ಮುಖ್ಯಮಂತ್ರಿಗಳು ಸಾರ್ವಜನಿಕರ ವಿರೋಧ ಕಂಡು ಬೆಂಗಳೂರು ನಗರಿಗೆ, ಅದರಲ್ಲೂ ನೂರು ಅಂಗಡಿಗಳಿಗೆಂದು ಅದನ್ನು ಮಿತಗೊಳಿಸಿದರು. ಬೀರ್, ವೈನ್ ಕುಡಿಯುವುದು ನಾಗರೀಕತೆಯ ಲಕ್ಷಣವೆಂದು ಮಾನ್ಯ ಮುಖ್ಯಮಂತ್ರಿಗಳು ಭಾವಿಸಿರಬಹುದು. ಗ್ರಾಮಗಳಲ್ಲಿ ಸಾಕ್ಷರತಾ - ಚಳುವಳಿಯ ಅಂಗವಾಗಿ ಮಹಿಳೆಯರು ಪಾನ ನಿರೋಧಕ್ಕೆ ಹೊಡೆದಾಡುತ್ತಿರುವಾಗ ಅಲ್ಲಿಗೆ ಹೋಗಿ ಅವರನ್ನು ಬೆನ್ನು ತಟ್ಟುವ ಇದೇ ರಾಜಕಾರಣಿಗಳು ನಗರಗಳಲ್ಲಿ ಪಾನ ಸ್ವೀಕಾರಕ್ಕೆ ಪ್ರೋತ್ಸಾಹಿಸುತ್ತಿರುವುದು ಎಂತಹ ವೈರುಧ್ಯ? ಮುಖ್ಯ ಮಂತ್ರಿಗಳ ಈ ಕೃತ್ಯವನ್ನು ಬೆಂಬಲಿಸುತ್ತಿರುವ ಅವರ ಸಹೋದ್ಯೋಗಿಗಳು ಎಂತಹ ಭವಿಷ್ಯದ ಕನಸು ಕಾಣುತ್ತಿದ್ದಾರೆ? ಆರೋಗ್ಯ ಸಚಿವೆ ನಫೀಜಾ ಫಜಲ್ ಕೂಡ ಮುಖ್ಯ ಮಂತ್ರಿಗಳ ಈ ಕೃತ್ಯವನ್ನು ಸಮರ್ಥಿಸಿಕೊಂಡಿರುವುದು ತೀರಾ ನಾಚಿಕೆಗೇಡಿನ ವಿಷಯವಾಗಿದೆ.

ಈ ಎಲ್ಲ ಸಂಗತಿಗಳು ಒಂದಂಶವನ್ನು ಸ್ಪಷ್ಟ ಮಾಡುತ್ತದೆ. ದಿನಸಿ ಅಂಗಡಿಗಳಲ್ಲಿ ಬೀರ್ ಮಾರಾಟ ಮಾಡುವುದಾಗಲೀ, ಬೀರ್ ಗ್ರಾಹಕರ ವಲಯವನ್ನು ವಿಸ್ತರಿಸುವ ಸರ್ಕಾರದ ಯೋಜನೆಯಾಗಲೀ ಇವು ಕೇವಲ ಸ್ಥಳೀಯ ರಾಜಕೀಯ ಪ್ರೇರಿತವಲ್ಲ. ವಿಶ್ವದ ಮಾರುಕಟ್ಟೆಯ ಗುತ್ತಿಗೆ ಹಿಡಿದವರು ಆಡಿಸುವ ಆರ್ಥಿಕ, ರಾಜಕೀಯ ದಾಳಗಳಾಗಿರುವ ನಮ್ಮ ಸರ್ಕಾರಗಳು ಜನ ಹಿತವನ್ನು ಪರಿಗಣಿಸದೆ ಮಾರುಕಟ್ಟೆಯತ್ತ ಮಾತ್ರ ಗಮನ ಹರಿಸಿವೆ. ಜಾಗತೀಕರಣದ ನೇರ ಪ್ರಭಾವ ಇದು. ಆದ್ದರಿಂದಲೇ ಬೀರ್, ವೈನ್ ಮಾರಾಟದ ವಿರುದ್ಧ ಹೋರಾಡುವುದು ಕೇವಲ ನೈತಿಕ ಪ್ರಶ್ನೆಯಾಗುವುದಿಲ್ಲ. ಇದೊಂದು ರಾಜಕೀಯ ಹೋರಾಟ. ಇದರ ಅಗತ್ಯವನ್ನು ಎಲ್ಲ ಜನಸಾಮಾನ್ಯರೂ ಮನಗಾಣಬೇಕು.

ಹೀಗೂ ನಡೆಯಬಹುದು

ಇದೊಂದು ನಂಬಲಾರದ ಘಟನೆ ಎನಿಸಬಹುದು ಅಥವಾ ಬುದ್ಧಿಕೆಟ್ಟವರ ಬವಣೆ ಎನಿಸಲೂ ಬಹುದು. ಆದರೆ ನಡೆದದ್ದಂತೂ ನಿಜ. ಇಂಥ ಮತಿಹೀನ ನಡವಳಿಕೆಗೆ ಮೂಲ ಪ್ರೇರಣೆ ನಮ್ಮ ಸಮೂಹ ಮಾಧ್ಯಮಗಳು ಅನ್ನುವುದನ್ನು ಮರೆಯಬಾರದು. ಇಷ್ಟು ಪೀಠಿಕೆ ಯಾಕೇ ಅಂದರೆ ಇದು ಘಟನೆಯ ಹಿನ್ನೋಟ. ನಡೆದದ್ದು ಏನಪ್ಪಾ ಅಂದ್ರೆ....

ಅದೊಂದು ಮಹಿಳಾ ಕಾಲೇಜು. ಒಂದು ಸಾಂಸ್ಕೃತಿಕ ಸಂಜೆ ಹುಡುಗಿಯರು ಹಾಡಿ, ನಟಿಸಿ ತಮ್ಮ ಪ್ರತಿಭೆಯನ್ನು ಪ್ರದರ್ಶಿಸುವ ಅವಕಾಶ. ವೇದಿಕೆ ಸಿದ್ಧವಾಗುತ್ತಿದೆ. ಮೈಕ್ ಮತ್ತು ಲೌಡ್ ಸ್ಪೀಕರನ್ನು ಹೊರಗಿನಿಂದ ತರಿಸಿದ್ದಾರೆ. ಒಂದು ಸುಂದರ ಹುಡುಗಿ, ಕಾಲೇಜಿನ ಗಾನ ಕೋಗಿಲೆ ಎನಿಸಿಕೊಂಡಾಕೆ ಪ್ರಾರ್ಥನೆ ಹಾಡಬೇಕಿತ್ತು. ಅವಳು ತನಗೆ ಬೇಕಾದ ಹಾಗೆ ಮೈಕ್ ಅರೇಂಜ್ ಮಾಡಿಕೊಡಲು ಅಲ್ಲಿ ತಲೆತಗ್ಗಿಸಿ ಕೆಲಸ ಮಾಡುತ್ತಿದ್ದ ಮೈಕ್ ಹುಡುಗನ ಬಳಿ ಸಾರಿದಳು. ''ಎಕ್ಸ್‌ಕ್ಯೂಸ್ ಮಿ'' ಎಂದಳು ಆ ಹುಡುಗನ ಗಮನ ಸೆಳೆಯಲು. ಹುಡುಗ ತಲೆ ಎತ್ತಿದ. ಆಗಸದಲ್ಲಿ ನೂರು ಮಿಂಚುಗಳು ಸಂಚರಿಸಿದವೇ? ಕಡಲ ಮೊರೆತ ಒಮ್ಮೆಲೇ ಭೋರ್ಗರೆದವೇ? ನಿಂತನೆಲ ಕುಸಿಯತೊಡಗಿತೇ? ಶಕುಂತಲೆ ದುಷ್ಯಂತರು, ಪಾರ್ವತಿ ದೇವದಾಸರು, ರೋಮಿಯೋ ಜೂಲಿಯಟ್ಟರು ಮರು ಹುಟ್ಟುಪಡೆದರೇ? ಹೌದು ಇದೆಲ್ಲವೂ ಆಕ್ಷಣದಲ್ಲಿ ಹುಡುಗಿಗಾಯಿತು. ಏಕೆಂದರೆ ಆ ಹುಡುಕ ಹೃತಿಕ್‌ರೋಷನ್ ಥರ ಇದ್ದ!

ಮುಂದಿನದೆಲ್ಲವೂ ಐಲು ಕಥೆಗಳೇ. ಈ ಶ್ರೀಮಂತ ಸುಂದರ ಹುಡುಗಿ ಆ ಕ್ಷಣದಲ್ಲಿ ವಿದ್ಯೆಯಿಲ್ಲದ, ಸರಿಯಾದ ಕೆಲಸವಿಲ್ಲದ, ಕೊಳೆಗೇರಿಯಲ್ಲಿ ವಾಸಿಸುತ್ತದ್ದ ಆ ಹುಡುಗನಿಗೆ ತನ್ನ ಪುಟ್ಟ ಹೃದಯವನ್ನರ್ಪಿಸಿ ಬಿಟ್ಟಳು. ಅದಕ್ಕೆ ಅವಳು ಕಂಡು ಕೊಂಡ ಕಾರಣ ಒಂದೇ ಅವನು ಹೃತಿಕ್‌ರೋಷನ್‌ಥರ ಇದ್ದ!! ಮುಂದಿನದೆಲ್ಲ ರಚಿತ ಪರದೆಯ ಕಥೆಯೇ. ಹುಡುಗಿ ಅರಮನೆಯನ್ನು ತ್ಯಜಿಸಿ ಗುಡಿಸಿಲಿಗೆ ನಡೆದೇ ಬಿಟ್ಟಳು. ತಮ್ಮ ಏಕೈಕ ಸುಪುತ್ರಿ ಹಿಡಿದ ಹಾದಿ ಕಂಡು ಹೆತ್ತವರು ಹೌಹಾರಿದರು. ಕಾಲೇಜಿಗೆ ಬಂದು ಸಮಸ್ತರನ್ನೂ ದೂಷಿಸಿದರು. ಉಪನ್ಯಾಸಕರೂ ಮಂಕಾಗಿ ಈ ಸಮಸ್ಯೆ ಬಿಡಿಸಲಾರದೆ ವಿಲಿವಿಲಿ ಒದ್ದಾಡಿದರು. ಗುಡಿಸಿಲಿಗೆ ಪಾದಯಾತ್ರೆ ಮಾಡಿದರು. ಹುಡುಗಿಯ ಮನ ಒಲಿಸಲೆತ್ನಿಸಿದರು. ಹುಡುಗನಿಗೆ ಹುಡುಗಿಯ ಬಗ್ಗೆ ಅಂಥ ತೀವ್ರ ಪ್ರೇಮವೇನಿಲ್ಲ. 'ತಾನಾಗಿ ಕುತ್ತಿಗೆಗೆ ಜೋತು ಬಿದ್ದಿದ್ದಾಳೆ ಇರಲಿ' ಎನ್ನುವ ಭಾವ. ಸಿನಿಮಾ ನಟನ ಹಾಗಿರುವ ಒಂದೇ ಕಾರಣಕ್ಕೆ ಇಂಥ ಬದುಕನ್ನು ಆರಿಸಿ ಕೊಳ್ಳುವ ಹುಚ್ಚು ತನಕ್ಕೆ ಮದ್ದಿದೆಯೇ?

– ಶಾಂತಾನಾಗರಾಜ್

★ ★ ★

ದಿನಸಿ ಅಂಗಡಿಗಳಲ್ಲಿ ಬೀರ್ ಮಾರಾಟ



ಕರ್ನಾಟಕದ ಮುಖ್ಯಮಂತ್ರಿ ಶ್ರೀ ಎಸ್. ಎಂ. ಕೃಷ್ಣರವರು ಕಳೆದ ಮುಂಗಡ ಪತ್ರವನ್ನು ಮಂಡಿಸಿದಾಗ ದಿನಸಿ ಅಂಗಡಿಗಳಲ್ಲಿ ಬೀರ್ ಮಾರಾಟ ಮಾಡಲು ಪರವಾನಗಿಯನ್ನು ಕೊಡುವುದಾಗಿ ಘೋಷಿಸಿದರು. ಮೊದಲಿಗೆ, ರಾಜ್ಯಾದ್ಯಂತ ಐನೂರು ಅಂಗಡಿಗಳಲ್ಲಿ ಮಾರಾಟಕ್ಕೆ ಪರವಾನಗಿ ಮೂಡುವುದಾಗಿ ಘೋಷಿಸಿಕೊಂಡ ಮುಖ್ಯ ಮಂತ್ರಿಗಳು ಸಾರ್ವಜನಿಕ ವಿರೋಧವನ್ನು ಗಮನಿಸಿ ಈ ಮಾರಾಟವನ್ನು ಬೆಂಗಳೂರು ನಗರಕ್ಕೆ ಮಾತ್ರ ಸೀಮಿತಗೊಳಿಸಿ ನೂರು ಅಂಗಡಿಗಳಿಗೆ ಪರವಾನಗಿ ಕೊಡುವುದಾಗಿ ಘೋಷಿಸಿದರು. ಸಮಾಜದ ವಿವಿಧ ವರ್ಗಗಳಿಂದ ಇದಕ್ಕೆ ವಿರೋಧ ಕಂಡು ಬಂತು.

ಮದ್ಯಪಾನ ಇಡೀ ಸಮಾಜವನ್ನು ಸುಡುತ್ತದೆ. ಅದರಲ್ಲೂ ವಿಶೇಷವಾಗಿ ಹೆಂಗಸರ ಪಾಲಿಗೆ ದುಸ್ವಪ್ನವೇ. ಮನೆಗಳನ್ನು ಒಡೆಯುತ್ತದೆ; ಕುಟುಂಬದ ನೆಮ್ಮದಿಯನ್ನು ಹಾಳು ಮಾಡುತ್ತದೆ. ಈ ಎಲ್ಲ ಕಾರಣಗಳಿಂದಾಗಿ ಬೀದಿ ಬೀದಿಗಳಲ್ಲಿ ದಿನಸಿ ಅಂಗಡಿಗಳಲ್ಲಿ ಬೀರ್ ಮಾರಾಟ ಮಾಡುವುದನ್ನು ಪ್ರಾರಂಭಿಸಿದರೆ ಮಕ್ಕಳು, ಹೆಂಗಸರೂ ಎಲ್ಲರೂ ಈ ಗ್ರಾಹಕವಲಯದಲ್ಲಿ ಸೇರಿಕೊಂಡು ಸಮಾಜದ ಸ್ವಾಸ್ಥ್ಯ ಇನ್ನೂ ಕೆಡುತ್ತದೆ, ಎಂಬುದನ್ನು ಮನಗಂಡ ನಗರದ ವಿವಿಧ ಮಹಿಳಾ ಸಂಘಟನೆಗಳು ಒಟ್ಟಾಗಿ ಸೇರಿ ರಚಿತವಾದದ್ದು ಸರ್ಕಾರದ ಮದ್ಯನೀತಿಯ ವಿರುದ್ಧದ ಮಹಿಳಾ ಕ್ರಿಯಾವೇದಿಕೆ.

ಕಾರ್ಯಕ್ರಮದ ಮೊದಲ ಹಂತವಾಗಿ ಈ ಮಹಿಳಾ ಕ್ರಿಯಾವೇದಿಕೆಯು ಮುಖ್ಯ ಮಂತ್ರಿಗಳಿಗೊಂದು ಬಹಿರಂಗ ಪತ್ರವನ್ನು ಪತ್ರಿಕಾ ಸಭೆಯಲ್ಲಿ ಬಿಡುಗಡೆ ಮಾಡಿತು. ಬೀರ್ ಮಾರಾಟದ ಸಮಸ್ಯೆಯು ಕೇವಲ ಮಹಿಳೆಯರ ಸಮಸ್ಯೆಯಲ್ಲವೆಂದು ಅದನ್ನು ಇನ್ನೂ ವ್ಯಾಪಕವಾದ ವೇದಿಕೆಯಡಿಯಲ್ಲಿ ಹೋರಾಟ ಮಾಡಬೇಕೆಂಬ ನಿರ್ಧಾರದಿಂದ ಮಹಿಳಾ ಕ್ರಿಯಾ ವೇದಿಕೆಯು ಗಾಂಧಿವಾದಿಗಳು ನಡೆಸಿದ್ದ ಸಭೆಯಲ್ಲಿ ಭಾಗವಹಿಸಿ ವಿಶಾಲವಾದ ಹೋರಾಟದ ವೇದಿಕೆಯನ್ನು ರೂಪಿಸಿಕೊಂಡಿತು.ಆಗ ರಚಿತವಾದ ಮದ್ಯಪಾನ ನೀತಿ ವಿರೋಧಿ ಜನತಾ ಒಕ್ಕೂಟದಲ್ಲಿ ಈ ನಾಡಿನ ಹಿರಿಯ ಸಾಹಿತಿಗಳು, ಗಾಂಧಿವಾದಿಗಳು, ಸ್ವಾತಂತ್ರ್ಯ ಹೋರಾಟಗಾರರು, ವಿಚಾರವಾದಿಗಳು, ಸಮಾಜ ಸುಧಾರಕರು, ಪ್ರಗತಿ ಪರ ಮಹಿಳಾ ಸಂಘಟನೆಗಳ ಪ್ರಮುಖರು, ಜನಪರ ಹೋರಾಟಗಾರರು ಭಾಗವಹಿಸಿ

ಸರ್ಕಾರದ ಮದ್ಯ ನೀತಿಯ ವಿರುದ್ಧ ಹೋರಾಡುವ ಪ್ರಜ್ಞೆ ತೊಟ್ಟರು.

ಮದ್ಯಪಾನ ನೀತಿ ವಿರೋಧಿ ಜನತಾ ಒಕ್ಕೂಟದ ಮೊದಲ ಕಾರ್ಯಕ್ರಮವಾಗಿ ಮುಖ್ಯಮಂತ್ರಿ ಎಸ್. ಎಂ. ಕೃಷ್ಣರವನ್ನು ಒಂದು ನಿಯೋಗವು ಭೇಟಿಮಾಡಿತು. ಶ್ರೀಮತಿ ಹೇಮಲತಾಮಹಿಷಿಯವರ ನೇತೃತ್ವದ ಈ ನಿಯೋಗದಲ್ಲಿ ಶ್ರೀ ಜಿ. ನಾರಾಯಣ, ಡಾ|| ಎಂ. ಚಿದಾನಂದಮೂರ್ತಿ, ಕೋ. ಚನ್ನಬಸಪ್ಪ, ಶ್ರೀಮತಿ ಎಸ್. ಜಿ. ಸುಶೀಲಮ್ಮ, ಶ್ರೀ ಎ. ಟಿ. ಬಾಬುರವರು ಭಾಗವಹಿಸಿದ್ದರು. ಮುಖ್ಯಮಂತ್ರಿಯವರು ತೆಗೆದುಕೊಳ್ಳುತ್ತಿರುವ ನಿರ್ಧಾರವು ಉಂಟು ಮಾಡುವ ದುಷ್ಪರಿಣಾಮಗಳನ್ನು ಕುರಿತು ಅವರಿಗೆ ಮನವರಿಕೆ ಮಾಡಿ ಕೊಟ್ಟದ್ದೇ ಅಲ್ಲದೆ, ಸರ್ಕಾರವು ಈ ಯೋಜನೆಯನ್ನು ಕೈಬಿಡದಿದ್ದಲ್ಲಿ ವ್ಯಾಪಕವಾದ ಹೋರಾಟವನ್ನು ನಡೆಸುವ ನಿರ್ಧಾರವನ್ನು ನಿಯೋಗವು ಮುಖ್ಯಮಂತ್ರಿಗಳಿಗೆ ಸ್ಪಷ್ಟಪಡಿಸಿತು.

ಮದ್ಯಪಾನ ನೀತಿ ವಿರೋಧಿ ಜನತಾ ಒಕ್ಕೂಟದ ಎರಡನೆಯ ಕಾರ್ಯಕ್ರಮವಾಗಿ 16-4-2001ರಂದು ಒಂದು ಬೃಹತ್ ಮೆರವಣಿಗೆ ಹಾಗೂ ಸಭೆಯನ್ನು ನಡೆಸುವ ಕಾರ್ಯಕ್ರಮವನ್ನು ಹಾಕಿ ಕೊಳ್ಳಲಾಗಿತ್ತು. ಇದಕ್ಕಾಗಿ ವ್ಯಾಪಕ ಪ್ರಚಾರ ಮತ್ತು ಸಂಘಟನೆಯ ಕಾರ್ಯ ನಡೆದಿತ್ತು. ಈ ಎಲ್ಲ ಪ್ರಯತ್ನಗಳು ಮುಖ್ಯಮಂತ್ರಿಯವರ ಮೇಲೆ ಒತ್ತಡ ಹೇರಿದ್ದರ ಪರಿಣಾಮವಾಗಿ ಶ್ರೀ ಎಸ್. ಎಂ. ಕೃಷ್ಣರವರು ಅಂಬೇಡ್ಕರ್ ದಿನಾಚರಣೆಯ ಸಂದರ್ಭದಲ್ಲಿ ಮಾತನಾಡುತ್ತಾ ದಿನಸಿ ಅಂಗಡಿಗಳಿಗೆ ಬೀರ್, ವೈನ್ ಮಾರಾಟ ಮಾಡುವ ಪರವಾನಗಿಯನ್ನು ಹಿಂತೆಗೆದುಕೊಳ್ಳುವುದಾಗಿ ಪ್ರಕಟಿಸಿದರು. ಜನತೆಯ ಒತ್ತಾಯ ಮತ್ತು ಅಭಿಪ್ರಾಯಕ್ಕೆ ಸರ್ಕಾರ ಮಣಿಯಲೇ ಬೇಕಾಯಿತು. ಯಾವ ವಿಧಾನಸೌಧದ ಒಳಗೆ ಕುಳಿತು ಮದ್ಯದ ದೊರೆಗಳ ಒತ್ತಡದಿಂದಾಗಿ ಬೀರ್, ವೈನ್ ಮಾರಾಟದ ನಿರ್ಧಾರವನ್ನು ಮಾನ್ಯ ಮುಖ್ಯ ಮಂತ್ರಿಗಳು ಪ್ರಕಟಿಸಿದರೋ, ಅವರೇ ಅದೇ ವಿಧಾನಸೌಧದ ಹೊರಗೆ, ಅದರ ಮುಂಭಾಗದಲ್ಲಿ ನಡೆದ ಸಮಾರಂಭದಲ್ಲಿ ಜನತೆಯ ಹೋರಾಟಕ್ಕೆ ಮಣಿದು ತಮ್ಮ ಆದೇಶವನ್ನು ಹಿಂತೆಗೆದು ಕೊಳ್ಳಬೇಕಾಯಿತು. ಇದು ಜನತೆಯ ಶಕ್ತಿಗೆ ಸಂದ ವಿಜಯ; ಮಹಿಳೆಯರ ನೇತೃತ್ವ ಶಕ್ತಿಗೆ, ಕರ್ತೃತ್ವ ಸಾಮರ್ಥ್ಯಕ್ಕೆ ಸಿಕ್ಕ ಗೌರವ.

16-4-2001ರಂದು ನಡೆಯಬೇಕಿದ್ದ ಪ್ರತಿಭಟನಾ ರ‍್ಯಾಲಿಯನ್ನು ಈ ಹಿನ್ನೆಲೆಯಲ್ಲಿ ಕೈಬಿಟ್ಟು ಅದನ್ನು ಒಂದು ಬಹಿರಂಗ ಪ್ರತಿಭಟನಾ ಸಭೆಯಾಗಿ ಪರಿವರ್ತಿಸಲಾಯಿತು. ಈ ಸಭೆಯ ಅಧ್ಯಕ್ಷತೆಯನ್ನು ಸುಮಂಗಲಿ ಸೇವಾ ಶ್ರಮದ ಅಧ್ಯಕ್ಷರಾದ ಶ್ರೀಮತಿ ಎಸ್. ಜಿ. ಸುಶೀಲಮ್ಮ ನಡೆಸಿಕೊಟ್ಟರು. ಈ ಪ್ರತಿಭಟನಾ ಸಭೆಯಲ್ಲಿ ಪ್ರಮುಖ ಮಹಿಳಾ, ಯುವ, ವಿದ್ಯಾರ್ಥಿ ಸಂಘಟನೆಗಳು, ನಾಡಿನ ಗಣ್ಯರು ಭಾಗವಹಿಸಿದ್ದರು.

ಗಾಂಧೀವಾದಿ ಶ್ರೀ ಎಚ್. ಎಸ್. ದೊರೆಸ್ವಾಮಿಯವರಿಂದ ಆರಂಭವಾದ ಸಭೆಯಲ್ಲಿ ಡಾ|| ಎಂ. ಚಿದಾನಂದ ಮೂರ್ತಿ, ಡಾ|| ಜಿ. ರಾಮಕೃಷ್ಣ ಡಾ|| ಎಚ್. ಎಂ. ಮರುಳ ಸಿದ್ದಯ್ಯ ಮುಂತಾದವರೊಂದಿಗೆ ಮಹಿಳಾ ಸಾಂಸ್ಕೃತಿಕ ಸಂಘಟನೆಯ ಡಾ|| ಎಚ್. ಜಿ. ಜಯಲಕ್ಷ್ಮಿ, ಜನವಾದಿ ಮಹಿಳಾ ಸಂಘಟನೆಯ ಪ್ರಭಾ, ನ್ಯಾಷನಲ್ ಫೆಡರೇಷನ್ ಆಫ್ ಇಂಡಿಯನ್ ವುಮೆನ್‌ನ ಕೆ. ಕೆ. ಸುಮಿತ್ರ ಬೆಂಗಳೂರು ನಗರ ಜಿಲ್ಲಾ ಮಹಿಳಾ ಮಂಡಲಿಯ ಶೋಭಾ, ಎನ್.ಎ.ಪಿ.ಎಂನ ಶ್ರೀ ಎ. ಎನ್. ಗೋಪಾಲಕೃಷ್ಣ ಕರ್ನಾಟಕ ರಾಜ್ಯ ಮದ್ಯಪಾನ ವಿರೋಧಿ ಆಂದೋಲನ ಶ್ರೀ ಎ. ಟಿ. ಬಾಬು, ಕರ್ನಾಟಕ ಕ್ರಾಂತಿ ಸಂಘದ ಶ್ರೀ ಕುಮಾರಸ್ವಾಮಿ, ಮುಂತಾದವರು ಸಭೆಯಲ್ಲಿ ಮಾಡಿದರು. ಸಭೆಯ ಕಾರ್ಯಕ್ರಮವನ್ನು ಜಾಗೃತಿ ಮಹಿಳಾ ಅಧ್ಯಯನ ಕೇಂದ್ರದ ಡಾ|. ಎನ್. ಗಾಯತ್ರಿ ನಿರ್ವಹಿಸಿದರು.

ತಾಳಿಭಾಗ್ಯ

ಯೋಜನೆ ಕೊಟ್ಟಿತು ಸರ್ಕಾರ
ಹೆಣ್ಣಿಗೆ ತಾಳೀಭಾಗ್ಯ
ಗಂಡಿಗೆ ಕೆಲಸ ಕೊಡದೇ
ಸರಾಯಿ ಪಾಕೀಟು ಕೊಟ್ಟು
ಕುಡಿದ ಗಂಡನ ಅಮಲು
ಇಳಿದು ಸೋರುವ ತನಕ
ಹೊಡೆತ ಬಡಿತಗಳು ಸತತ
ಯಾರಿಗೆ ಬೇಕು ಸರ್ಕಾರದ
ನೇಣಿಗೇರಿಸಿ - ವಿಷವ
ಕುಡಿಸಾವ ತಾಳೀಭಾಗ್ಯ

ಬೆಳೆದಿದ್ದೇವೆ

ಮಂತ್ರಿಗಳ ಕೋಣೆಯಲಿ
ಬಳೆಗಳ ಸದ್ದು
ಸರ್ಕ್ಯುಲೇಶನ್ ಹೆಚ್ಚಿಸಲು
ಸೆಕ್ಸ್, ಕ್ರೈಮ್‌ಗಳು
ಮಾರಾಟವಾಗುವ ಹೆಣ್ತನಗಳು
ಪೋಲೀಸರ ಭದ್ರ ಪಹರೆಯಲಿ
ಸಿಲಿಕಾನ್ ವ್ಯಾಲಿಯಲಿ
ಮಾರಾಟವಾಗುವ ಮಾತೃತ್ವಗಳಿಂದ
ತಲೆಹಿಡುಕರ ಕಿಸೆ ಭಾರ
ಪಕ್ಕದಲ್ಲಿಯ ಸರ್ಕಾರ
ನೀಡುತ್ತಿದೆ ಲೈಸೆನ್ಸ್
ಮಾತೆಯರಿಗೆ ಬಾರ್ ನಡೆಸಲು

- ಕೆ. ಶರೀಫಾ

ಚಿತೆಯೇರುವ ಪ್ರಶ್ನೆ

ಏಳೇಳು ಜನುಮದಲಿ
ನನ್ನನ್ನೇ ಸತಿಯಾಗಿ
ಪಡೆಯುವ ವಾಗ್ದಾನವನು
ಅಂದು ನೀ ಮಾಡಿದ್ದೆ.
ಸಪ್ತಪದಿ ತುಳಿಯುವಾಗೆ
ಇಂದೇಕೆ ಕೇಳುತ್ತಿರುವೆ
''ನಾನು ಸತ್ತರೆ ನೀನು
ನನ್ನೊಂದಿಗೆ ಚಿತೆಯೇರುವೆಯಾ?
ಸತಿಯಾಗುವೆಯಾ?'' ಎಂದು
ಆಗ ನಾನು ಹೇಳಿದೆ ''ನೀನಿನ್ನೂ
ನನ್ನ ಕಣ್ಣುಂದೆಯೇ ನಿಂತಿರುವೆ
ಜೀವಂತ ಉಸಿರಾಡುತ್ತಿರುವೆ
ಮೊದಲೊಮ್ಮೆ ನೀನು ನನಗಾಗಿ
ಸತ್ತಾದರೂ ತೋರಿಸು
ಆ ಮೇಲೆ ಬರುವುದು
ನಾನು ಚಿತೆಗೇರುವ ಪ್ರಶ್ನೆ

ಪಂಚನಾಮೆ

ಬೆಂಕಿಗಾಹುತಿಯಾಗಿ ಸುಟ್ಟು ಹೋದ
ನನ್ನ ಶರೀರದ ಅವಶೇಷಗಳ ಬೂದಿ
ತುಸು ತುಸುವೇ ಸರಿಸಿದರೆ ಪಕ್ಕಕೆ
ಮುದ್ದೆ ಕರಕಲು ಮಾಂಸದ ಮಧ್ಯೆ
ಎದ್ದು ಕಾಣುವ ಬಿಳಿದಾದ
ನನ್ನ ಬಲಗಾಲಿನ ಮೂಳೆ

ಮಧ್ಯ ಸೀಳು ಬಿಟ್ಟದ್ದು
ಸತ್ಯವನ್ನು ಸಾರಿ ಸಾರಿ ಹೇಳುತ್ತಿದ್ದರೂ
ಪೋಲೀಸರು ಅಧಿಕಾರಿಗಳು ಬಂದರು
ಮಹಜರು-ಪಂಚನಾಮೆ ನಡಸಿದರು
ವರದಿಯಲಿ ದಾಖಲಿಸಿ ಹೋದರು
ಇದು ಆತ್ಮ ಹತ್ಯೆಯ ಪ್ರಕರಣವೆಂದು

ಪಾಂಚಾಲಿ

ಜೂಜಿನ ವಸ್ತುವಾಗಿ
ಪಣಕ್ಕಿಟ್ಟ ಪಾಂಚಾಲಿ
ಅಪಮಾನದ ಬೆಂಕಿಯಲ್ಲಿ
ಬೆಂದು ಹೋಗುವಂತೆ
ದಹಿಸಿ ಹೋಗಲಾರೆ
ಯಾರದೋ ವಸ್ತುವಾಗುವ
ಬದಲು ಲೋಕದಲಿ ನನ್ನ
ಅಸ್ತಿತ್ವ ಹುಡುಕತಲಿರುವೆ

ನಿಗೂಢ ರಹಸ್ಯ

ಅಪವಾದಗಳಿಗೆ ಹೆದರಿ
ಬಾಯಿ ತೆರೆದ ಭೂಮಿಯ
ಒಡಲ ಗರ್ಭ ಸೇರುವ ಸೀತೆಯರ ಸಂತತಿ
ತನ್ನಕ್ಕ ತಂಗಿಯರನು
ನುಂಗಿದ ಪಾಷಾಣಗಳ ಒಳಗಿಟ್ಟು
ಮೇಲೆ ಗಂಭೀರ ಮುಖ ಹೊತ್ತು
ನಿಗೂಢ ರಹಸ್ಯಗಳನು
ಹೃದಯದಲಿ ಮುಚ್ಚಿಟ್ಟುಕೊಂಡಿದೆ

ಮನುವಿಗೆ ಗಲ್ಲು

ನಡುಬೀದಿಯಲಿ ಸೇರಿದ
ಸೀತೆ, ದ್ರೌಪದಿ, ಗೋಪಿಕೆಯರಾದಿಯಾಗಿ
ದುಷ್ಯಂತನ ಶಾಕುಂತಲೆ
ಹರಿಶ್ಚಂದ್ರನ ಚಂದ್ರಮತಿ
ಕಲ್ಲಾದ ಅಹಲ್ಯೆಯರು
ಕೈಯಲ್ಲಿ ಕೊಳ್ಳಿಹಿಡಿದು
ನಡುಬೀದಿಯ ನೇಣುಗಂಬದಲಿ
ಮನುವಿಗೆ ನಿಲ್ಲಿಸಿ ಕೇಳುತ್ತಿದ್ದಾರೆ.
ಹೇಳು ನಿನ್ನ ಅಂತಿಮ ಇಚ್ಛೆ ಏನೆಂದು

– *ಕೆ. ಶರೀಫಾ*

('ಪಾಂಚಾಲಿ' ಕವನ ಸಂಕಲನದಿಂದ)

ಭೂಪಾಲದ ಬೇಗಂರು

ಬೇಗಂಸ್ ಆಫ್ ಭೂಪಾಲ್, ಕ್ಲಾಡಿಯಾ ಪ್ರೆಕೆಲ್, ಲೋಟಸ್, ರೋಲಿಬುಕ್ಸ್, ಪುಟ 224, ರೂ 295

ಚರಿತ್ರೆಯಲ್ಲಿ ಮಕ್ಕಳಿಲ್ಲದೆ ದೊರೆ ಮಡಿದಾಗ, ಹಾಗೂ ಅಪ್ರಾಪ್ತ ವಯಸ್ಕ ಮಕ್ಕಳಿದ್ದಾಗ ರಾಣಿಯರು ರಾಜ್ಯದ ರಾಜ್ಯಭಾರ ನಡೆಸಿದ ನಿದರ್ಶನಗಳು ಹಲವಾರಿವೆ. ಹೀಗಾಗಿ ಗಂಡನ ಅನುಪಸ್ಥಿತಿಯಲ್ಲಿ ಮಾತ್ರ ರಾಣಿಯರು ತಮ್ಮ ಅಧಿಕಾರದ ಸಾಮರ್ಥ್ಯ ಪ್ರತಿಭೆಗಳನ್ನು ಮೆರೆಯುವ 'ಅವಕಾಶ' ಪಡೆದದ್ದು.

ಆದರೆ ಇದಕ್ಕೆ ಅಪವಾದವಾಗಿ ಭೂಪಾಲ್‌ವನ್ನು ಆಳಿದ ನಾಲ್ಕು ಬೇಗಂಗಳ ಚರಿತ್ರೆಯನ್ನು ಈ ಪುಸ್ತಕದಲ್ಲಿ ಕಾಣುತ್ತೇವೆ. ದೇಶದ ಉಳಿದ ಭಾಗಗಳಲ್ಲೆಲ್ಲಾ ದೇಶಪ್ರೇಮದ ಅಲೆ ಉಕ್ಕಿ ಹರಿಯುತ್ತಿದ್ದಾಗ, ರಾಷ್ಟ್ರೀಯ ವಿಮೋಚನಾ ಚಳುವಳಿಯಲ್ಲಿ ಬ್ರಿಟಿಷರ ವಿರುದ್ಧ ಸಮರ ಸಾರಿದ್ದಾಗ, ಭೂಪಾಲದ ದೇಶೀಯ ಸಂಸ್ಥಾನವು ಬೇಗಂರ ಆಡಳಿತದಲ್ಲಿ ಇವು ಯಾವುದರ ಬಿಸಿಯನ್ನೂ ತಟ್ಟಿಸಿಕೊಳ್ಳದೆ' ತಂಪಾಗಿತ್ತು. ಬ್ರಿಟಿಷರ ರಕ್ಷಣೆಯ ನೆರಳಿನಲ್ಲಿ ಭೂಪಾಲದ ಬೇಗಂರು 1819ರಿಂದ 1926ರವರೆಗೆ, ಒಂದು ಶತಮಾನದ ಕಾಲ ರಾಜ್ಯಭಾರ ನಡೆಸಿದರು.

19ನೆಯ ಶತಮಾನದಲ್ಲಿ ಭಾರತದಲ್ಲಿದ್ದ ದೇಶೀಯ ಸಂಸ್ಥಾನಗಳಲ್ಲಿ ಭೂಪಾಲದ ಚರಿತ್ರೆಯೇ ವಿಶಿಷ್ಟವಾದದ್ದು. ಇದಕ್ಕೆ ಮುಖ್ಯ ಕಾರಣವೆಂದರೆ, ಸತತವಾಗಿ ನಾಲ್ಕು ತಲೆಮಾರುಗಳ ಕಾಲ ರಾಣಿಯರು ಇಲ್ಲಿ ರಾಜ್ಯಭಾರ ಮಾಡಿದರು. ಇಡೀ ದೇಶದಲ್ಲಿ ಇಲ್ಲಿ ಮಾತ್ರ ಅಧಿಕಾರದ ಹಸ್ತಾಂತರವು ಮೊದಲನೇ ಮಗ ಅಥವಾ ಮಗಳ ಪಾಲಿನದಾಗಿತ್ತು. 1798ರಿಂದ ಈ ಸಂಸ್ಥಾನದ ರಾಣಿಯರು ಬ್ರಿಟಿಷರೊಂದಿಗೆ ಅತಿ ಸಖ್ಯ ಭಾವವನ್ನು ಹೊಂದಿದ್ದು ಅದನ್ನು ತಮ್ಮ ಲಾಭಕ್ಕಾಗಿ ಬಳಸಿಕೊಂಡರು. ಬ್ರಿಟಿಷರಿಗೂ ಇದು ಲಾಭದಾಯಕವಾಗೇ ಇತ್ತು. ಇಲ್ಲಿನ ಮತ್ತೊಂದು ವೈಶಿಷ್ಟ್ಯತೆಯೆಂದರೆ ಇಸ್ಲಾಮಿಕ್ ಧರ್ಮ ಮತ್ತು ಸಂಸ್ಕೃತಿಯಲ್ಲಿ, ಮಹತ್ತರ ಅಭಿವೃದ್ಧಿಯುಂಟಾಗಿ ಇಡೀ ಶತಮಾನ ಅದರ ಛಾಯೆ ಹಾಗೇ ಉಳಿದಿತ್ತು.

ಈ ಪುಸ್ತಕದ ಆರಂಭದಲ್ಲಿ 1818ರಲ್ಲಿ ನಡೆದ ರಾಯ್‌ಸನ್ ಒಪ್ಪಂದದ ಪ್ರಸ್ತಾಪವಿದೆ. ಈ ಒಪ್ಪಂದದನ್ವಯ ಬ್ರಿಟಿಷರ ರಕ್ಷಣೆಯೊಳಗೆ ಭೂಪಾಲ್ ಸಂಸ್ಥಾನವು ಒಳಪಡುತ್ತದೆ. ಭೂಪಾಲದಲ್ಲಿ ಬ್ರಿಟಿಷರ ರಾಜಕೀಯ ಏಜೆಂಟನಾಗಿದ್ದ ನಾದರ್ ಮಹಮದ್ ಖಾನ್‌ನ ಮರಣದ ನಂತರ ಮೇಜರ್ ಹೆನ್ಲಿಯು ಖುದ್‌ಸಿಯೂ ಬೇಗಂಳನ್ನು ಭೂಪಾಲ್‌ದ ಸಂಸ್ಥಾನದ ಅಧಿಪತಿಯನ್ನಾಗಿ ಪ್ರತಿಷ್ಠಾಪಿಸಿದ. ಖುದ್‌ಸಿಯೂ ಬೇಗಂ ಭೂಪಾಲ್‌ದಲ್ಲಿ ಮಹಿಳಾ ಆಳ್ವಿಕೆಯ ಶತಕಕ್ಕೆ ನಾಂದಿ ಹಾಡಿದಳು. ಅವಳ ಹಿಂದಿನ ಧೀರ ಪರಂಪರೆಯನ್ನು ಸ್ಮರಿಸುತ್ತಾ ಅವಳು 'ಪರದಾ' ಪದ್ಧತಿಯನ್ನು ಕಿತ್ತೊಗೆದಳು; ರಾಜಕೀಯ ಒಳಸಂಚುಗಳನ್ನು ಹದ್ದುಬಸ್ತಿನಲ್ಲಿಟ್ಟುಕೊಂಡು ರಾಜ್ಯಭಾರದಲ್ಲಿ ಒಗ್ಗಟ್ಟನ್ನು ಕಾಪಾಡಿಕೊಂಡಳು.

ಖುದ್‌ಸಿಯೂ ಬೇಗಂಳ ನಂತರ ಆಳ್ವಿಕೆಗೆ ಬಂದ ಸಿಖಂದರ್ ಬೇಗಂ ಇಸ್ಲಾಂಮಿಕ್ ನೀತಿಗನುಗುಣವಾಗಿ ಭೂಪಾಲ್‌ನ್ನು ಪುನರ್ರಚಿಸಿದಳು. 1857ರಲ್ಲಿ ನಡೆದ ಸಿಪಾಯಿದಂಗೆಯ ಸಂದರ್ಭದಲ್ಲಿ ಸಿಖಂದರ್ ಬೇಗಂಳು ಬ್ರಿಟಿಷರಿಗೆ ಬೆಂಬಲ ನೀಡಿದ್ದಳು. ಅಷ್ಟೇ ಅಲ್ಲದೆ ಅವಳ ಆಡಳಿತ ಸುಧಾರಣೆಯ ವೈಖರಿಯನ್ನು ಮೆಚ್ಚಿದ ಬ್ರಿಟಿಷ್ ಸರ್ಕಾರ ಅವಳಿಗೆ ಸ್ಟಾರ್ ಆಫ್ ಇಂಡಿಯಾ ಪ್ರಶಸ್ತಿಯನ್ನು ಮತ್ತು ಗ್ರ್ಯಾಂಡ್ ಕಮೀಷನರ್ ಎಂಬ ಸನ್ಮಾನವನ್ನು ನೀಡಿತು. ಮೆಕ್ಕಾಗೆ ಹಜ್ ಯಾತ್ರೆ ಮಾಡಿದ ಮೊದಲ ಮುಸ್ಲಿಂ ರಾಣಿಯಿವಳು.

ಇವಳ ನಂತರ ಆಡಳಿತಕ್ಕೆ ಬಂದ ಇವಳ ಮಗಳು ಶಹಜಹಾನ್ ಬೇಗಂ ಶಿಕ್ಷಣ, ಕಲೆ, ಶಿಲ್ಪಕಲೆ ಮುಂತಾದ ಲಲಿತಕಲೆಗಳ ಅಭಿವೃದ್ಧಿಗೆ ಶ್ರಮಿಸಿ ಅವಳ ತಾಯಿಯು ಆರಂಭಿಸಿದ ಪರಂಪರೆಯನ್ನು ಮುಂದುವರೆಸಿದಳು. ಅವಳು ಮುಸ್ಲಿಂ ಮತ ಶ್ರದ್ಧೆಯ ಸಮರ್ಥಕಳಾದಳು ಮತ್ತು ನೀತಿ ಸಂಹಿತೆಯನ್ನು ಕ್ರೋಢೀಕರಿಸಿದಳು.

ಭೂಪಾಲದ ರಾಜ್ಯಭಾರ ಮಾಡಿದ ರಾಣಿಯರ ಸರಣಿಯಲ್ಲಿ ಮೂರನೆಯವರಾದ ಸುಲ್ತಾನ್ ಜಹಾನ್ ಬೇಗಂ ಮಹಿಳಾ ಆಳ್ವಿಕೆಯ ಬಗ್ಗೆ ಒಳ್ಳೆಯ ಅಭಿಪ್ರಾಯ ಮೂಡಿಸಲು ಅಪಾರ ಶ್ರಮ ವಹಿಸಿದಳು. ಸಂಸ್ಕೃತಿಯ ಪುರುತ್ಥಾನಕ್ಕೆ ಸ್ತ್ರೀ ಶಿಕ್ಷಣವೇ ಕೀಲಿಕೈ ಎಂದರಿತ ಈ ಬೇಗಂ, ಕಲೆ, ವಿಜ್ಞಾನ, ತಂತ್ರ ನೈಪುಣ್ಯ ಹಾಗೂ ವೈದ್ಯಕೀಯವನ್ನು ಭೋಧಿಸುವ ಹಲವಾರು ಶಾಲಾ, ಕಾಲೇಜುಗಳನ್ನು ತೆರೆದು, ಅದರ ಅಗತ್ಯವನ್ನು ಒತ್ತಿ ಹೇಳಿದಳು. ಕುತೂಹಲದ ಸಂಗತಿಯೆಂದರೆ ಇಷ್ಟೆಲ್ಲ ಹೊಸಗಾಳಿಯ ನಂತರವೂ 'ಪರದಾ' ಕುರಿತಂತೆ, 'ಪರದಾ ಏಕೆ ಅಗತ್ಯ?' ಎಂಬ ಕೃತಿಯನ್ನು ಅವಳು ರಚಿಸಿ ಪರದಾ ಪದ್ಧತಿಯನ್ನು ಸಮರ್ಥಿಸಿಕೊಂಡಿರುವುದು ದುರಂತವೇ ಸರಿ. ಅವಳಿಗೆ ಮತ್ತು ಅವಳ ತಾಯಿಗೆ ರಾಜ್ಯಭಾರದ ಕಾರ್ಯಕ್ರಮವನ್ನು ನಿರ್ವಹಿಸಲು ಪರದಾ ಅಗತ್ಯ ಪದ್ಧತಿಯಾಗಿ ಕಂಡಿರಬೇಕು. ಅವಳ ನಂತರ ರಾಜ್ಯಭಾರವು ಪುರುಷ ಸಂತತಿಗೆ ವರ್ಗಾವಣೆಯಾಯಿತು.

ಈ ಕೃತಿಯನ್ನು ರಚಿಸಲು ಕ್ಲಾಡಿಯಾ ಪ್ರೆಕೆಲ್ ಹಲವಾರು ಮೂಲ ಆಕರಗಳನ್ನು ಬಳಸಿಕೊಂಡಿದ್ದಾಳೆ. ಪತ್ರಿಕೆಗಳು, ಡೈರಿಗಳು, ಹಳೆಯ ದಾಖಲೆಗಳು, ರಾಜ ಮನೆತನದ ಪತ್ರ ವ್ಯವಹಾರಗಳು, ಇತ್ಯಾದಿ ಅಧಿಕೃತವಾದ ಹಿನ್ನೆಲೆಯಿಂದ ಈ ಕೃತಿ ರಚಿತವಾಗಿದೆ. ಈ ಕೃತಿಯಲ್ಲಿ ಪ್ರಸ್ತಾಪವಾಗಿರುವ ಬೇಗಂಗಳ ಬಗೆಗಿನ ಮೆಚ್ಚುಗೆ, ಅಂತಃಪುರದ ವೈಭವದ ವಿವಾಹಗಳ ವರ್ಣನೆ, ಮೊಹರಂ ಹಬ್ಬ, 'ಸ್ಟಾರ್ ಆಫ್ ಇಂಡಿಯಾ'ದ ಪ್ರಶಸ್ತಿ ಪ್ರದಾನ ಸಮಾರಂಭ, ಮೆಕ್ಕಾ ಯಾತ್ರೆ - ಇವೆಲ್ಲ ಆಕರ್ಷಕವಾಗಿ ಓದಿಸಿಕೊಂಡು ಹೋಗುತ್ತವೆ. ಇದು ಬೇಗಂಗಳ ಚರಿತ್ರೆಯಾಗಿ ಅರ್ಧ ಐತಿಹಾಸಿಕ ಗ್ರಂಥವೆನಿಸಿಕೊಂಡರೆ, ಇನ್ನರ್ಧ ಬೇಗಂಗಳ ಜೀವನ ಚರಿತ್ರೆಯ ಗ್ರಂಥವಾಗಿದೆ. ಆದರೆ ಮಹಿಳೆ ಮತ್ತು ರಾಜಕೀಯ ಅಧಿಕಾರದ ಹಿನ್ನೆಲೆಯಲ್ಲಿ ಮಹಿಳಾ ಅಧ್ಯಯನಕ್ಕೆ ಒಂದು ಉಪಯುಕ್ತ ಮಾಹಿತಿ ಗ್ರಂಥವಾಗುತ್ತದೆ. ★

ಕರ್ನಾಟಕ ಮುಖ್ಯಮಂತ್ರಿಗಳಿಗೊಂದು ಬಹಿರಂಗ ಪತ್ರ

ಮಾನ್ಯರೇ, ಇತ್ತೀಚೆಗೆ ವಿಧಾನಮಂಡಲದಲ್ಲಿ ಬೀರ್ ಬಗ್ಗೆ ಹಾಗೂ ಬೀರ್ ಕುಡಿಯುವುದರ ಬಗ್ಗೆ ನಿಮ್ಮ ಮೆಚ್ಚಿಗೆಯ ನುಡಿಗಳನ್ನು ಕೇಳಿ ನಮ್ಮೆಲ್ಲರಿಗೆ ಬಹಳ ನಿರಾಶೆಯಾಗಿದೆ. ವಿವೇಕಶಾಲಿಗಳಾದ, ಸೂಕ್ಷ್ಮ ಮತಿಗಳಾದ ಮುಖ್ಯಮಂತ್ರಿಗಳು ತಾವಾಗಿದ್ದೀರಿ ಎನ್ನುವ ಜನಾಭಿಪ್ರಾಯಕ್ಕೆ ಇದು ಧಕ್ಕೆ ತಂದಿದೆ. ಇಂತಹ ಬಜೆಟ್ ಉಡುಗೊರೆಯನ್ನು ನಿಮ್ಮಿಂದ ನಾವು ನಿರೀಕ್ಷಿಸಿರಲಿಲ್ಲ.

ಬೆಂಗಳೂರಿನ ನಾಗರೀಕರು ನಿಮ್ಮಿಂದ ಬಯಸಿದ್ದು ಉತ್ತಮ ರಸ್ತೆಗಳನ್ನು, ಶುದ್ಧ ಗಾಳಿ ನೀರನ್ನು, ನಿರಂತರ ವಿದ್ಯುಚ್ಛಕ್ತಿಯನ್ನು ಸರಬರಾಜನ್ನೇ ಹೊರತು ಪ್ರಾವಿಷನ್ ಸ್ಟೋರ್ ಮೂಲಕ ನಿರಂತರ, ತಡೆರಹಿತ ಬೀರ್ ಸರಬರಾಜನ್ನಲ್ಲ. ಇಷ್ಟು ಸುಲಭವಾಗಿ ಬೀರನ್ನು ಸಿಗುವಂತೆ ಮಾಡಿದುದರ ಲಾಭ ಯಾರಿಗೆ ಎಂದು ದಯವಿಟ್ಟು ತಿಳಿಸಿ. ನೀರಾದರೂ ಇಷ್ಟು ಸುಲಭವಾಗಿ ಸಿಕ್ಕಿದ್ದರೆ ಸಂತೋಷವಾಗುತ್ತಿತ್ತು. ಪ್ರಾವಿಷನ್ ಸ್ಟೋರ್‌ನ ಷೆಲ್ಪ್‌ನಿಂದ ಉಳಿದ ಜೀವನಾವಶ್ಯಕ ಸಾಮಾನುಗಳೊಂದಿಗೆ ಬೀರ್ ಬಾಟಲ್-ಟಿನ್‌ಗಳನ್ನು ತೆಗೆದುಕೊಳ್ಳಲು ಅನುಕೂಲ ಮಾಡಿಕೊಡುವ ಸರ್ಕಾರದ ಈ ನೀತಿಯ ಹಿಂದಿರುವ ಒತ್ತಡಗಳೇನು, ದಾಕ್ಷಿಣ್ಯಗಳೇನು? (ಸಾರ್ವಜನಿಕರ ಆಗ್ರಹವಂತೂ ಇಲ್ಲಿ ಇಲ್ಲ.) ಈ ಮೂಲಕ ಸರ್ಕಾರ ಸಾರ್ವಜನಿಕರಿಗೆ ಕೊಡುತ್ತಿರುವ ಸಂದೇಶವೇನು? ನಿಮ್ಮ ಬಲವಾದ ಶಿಫಾರಸ್ಸು ಇದ್ದರೂ ಸಹ ನಾವು ಬೀರನ್ನು ಊಟದ ಟೇಬಲ್ ಮೇಲೆ ಉಳಿದ ಆಹಾರಪದಾರ್ಥಗಳೊಂದಿಗೆ ಇಟ್ಟು ಕೊಳ್ಳ ಬಹುದಾದ 'ಬೀವರೇಜ್' ಎಂದು ಒಪ್ಪಿಕೊಳ್ಳಲು ನಿರಾಕರಿಸುತ್ತೇವೆ.

ಪಾನಪ್ರಿಯರು 4 ಪರ್ಸೆಂಟ್ ಆಲ್ಕೋಹಾಲ್‌ಗೆ ತೃಪ್ತವಾಗಿ 'ಹಾರ್ಡ್‌ಲಿಕ್ಕರ್'ಗೆ ಮುಂದುವರಿಯುವುದಿಲ್ಲ ಎನ್ನುವುದು ತಪ್ಪು ಕಲ್ಪನೆ. ಅದಕ್ಕೆ ವೈಜ್ಞಾನಿಕ ಆಧಾರವಿಲ್ಲ, ಅಂಕಿ-ಅಂಶಗಳ ಪ್ರಮಾಣವಿಲ್ಲ. ಬೀರ್ ಮುಂದಿನ ಮದ್ಯಕ್ಕೆ ನಾಂದಿಯಾಗಬಹುದಷ್ಟೇ. ಬೆಂಗಳೂರಿಗಷ್ಟೇ ಈ ನೀತಿಯನ್ನು ಸೀಮಿತಗೊಳಿಸಿ ಸರ್ಕಾರ ನಮಗೆ ಮಹದುಪಕಾರವನ್ನೇನೂ ಮಾಡಿಲ್ಲ. ಬೆಂಗಳೂರಿನಲ್ಲಿರುವಷ್ಟು ಶಾಲಾ ಕಾಲೇಜುಗಳು, ಸಾಫ್ಟ್‌ವೇರ್ ಕಂಪೆನಿಗಳು, ಬೇರೆ ಊರಿನಿಂದ ಬಂದು ಹೋಗುವ ಜನರು ಬೇರೆಲ್ಲಿಯೂ ಇಲ್ಲ. ಈಗಾಗಲೇ ಪಬ್‌ಗಳು, ಬಾರ್‌ಗಳು ಬೆಂಗಳೂರನ್ನು ಪ್ರಸಿದ್ಧಿಗೊಳಿಸಿವೆ. ಬೀದಿ - ಬೀದಿಗಳಲ್ಲಿ 2-3 ಲಿಕ್ಕರ್ ಶಾಪ್‌ಗಳು ರಾರಾಜಿಸುತ್ತಿವೆ. ಬೀರ್‌ನಿಂದ ಆರಂಭಿಸಿ ಇಡೀ ಬೆಂಗಳೂರನ್ನು ಮದ್ಯದಲ್ಲೆ ಮುಳುಗಿಸುವ ಯೋಜನೆ ಲಿಕ್ಕರಲಾಬಿಗೆ ಇರುವಂತಿದೆ.

ನಮ್ಮ ಬೆಂಗಳೂರಿನ ಬಾರ್‌ಗಳಲ್ಲಿ ಹೈಸ್ಕೂಲ್ ವಿದ್ಯಾರ್ಥಿಗಳಿಗೂ ಮದ್ಯ ಕುಡಿಯಲು ಮುಕ್ತ ಅವಕಾಶವಿದೆ. ಕಾನೂನಿಗೆ ವಿರುದ್ಧವಾಗಿದ್ದರೂ ಕೂಡಾ. ಹಾಗಿದ್ದಾಗ ಇಂತಹ ಅಪ್ರಾಪ್ತವಯಸ್ಕರ ಕೈಗೆ ಬೀರ್ ಸಿಗದಂತೆ ಮಾಡಲು ಏನು ಕ್ರಮ ಕೈಗೊಳ್ಳುತ್ತೀರಿ? ಮಹಿಳೆಯರು - ಮಕ್ಕಳಿಗೂ ಬೀರ್‌ನ ಚಟ ಅಂಟಿಕೊಳ್ಳಬೇಕೆಂದು ಬಯಸುವಿರಾ?

ಈಗಾಗಲೇ ಮಹಿಳೆಯರು ಮುಕ್ತ ಮದ್ಯಪಾನ ನೀತಿಯಿಂದ ಅನೇಕ ಕೌಟುಂಬಿಕ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಮಕ್ಕಳು ಹಣದ ಅಭಾವದಿಂದ ಶಾಲೆಗಳನ್ನು ಬಿಡುತ್ತಿದ್ದಾರೆ. ಕುಡಿತಕ್ಕೇ ಹಣ ಸಾಲದಾಗ ಮತ್ತೇನು ತಾನೇ ಸಾಧ್ಯ? ಮದ್ಯಪಾನದ ವಿರುದ್ಧ ಮಹಿಳೆಯರು ಹೋರಾಟ ನಡೆಸುತ್ತಿರುವಾಗ ಸರ್ಕಾರದ ಬೀರ್ ನೀತಿ ಅವರಿಗೆ ಆಘಾತ ಉಂಟು ಮಾಡಿದೆ. ಸರ್ಕಾರದ ಹೊಸ ಬೀರ್ ನೀತಿಯನ್ನು ನಾವೆಲ್ಲ ಒಕ್ಕೊರಲಿನಿಂದ ವಿರೋಧಿಸುತ್ತೇವೆ. ಅಷ್ಟೇ ಅಲ್ಲ, ಕಿರಾಣಿ ಅಂಗಡಿಗಳಲ್ಲಿ ಬೀರ್ ಮಾರಾಟ ಮಾಡಲು ಹೊರಟಿರುವ ನಿಮ್ಮ ಆದೇಶವನ್ನು ಕೂಡಲೆ ಹಿಂತೆಗೆದು ಕೊಳ್ಳಬೇಕೆಂದು ಒತ್ತಾಯಿಸುತ್ತೇವೆ.

ವಂದನೆಗಳು

ಇಂತಿ ತಮ್ಮ ವಿಶ್ವಾಸಿಗಳು
(ಜಾಗೃತಿ ಮಹಿಳಾ ಅಧ್ಯಯನ ಕೇಂದ್ರ
ಸುಮಂಗಲೆ ಸೇವಾಶ್ರಮ
ಬೆಂಗಳೂರು ನಗರ ಜಿಲ್ಲಾ ಮಹಿಳಾ ಮಹಾ ಮಂಡಲ
ನ್ಯಾಷನಲ್ ಫೆಡರೇಶನ್ ಆಫ್ ಇಂಡಿಯನ್ ವಿಮೆನ್
ಮಹಿಳಾ ಸಾಂಸ್ಕೃತಿಕ ಸಂಘಟನೆ
ನೆರವು
ಜನವಾದಿ ಮಹಿಳಾ ಸಂಘಟನೆ
ಮಾನಸ
ಕರ್ನಾಟಕ ರಾಜ್ಯ ಸ್ವಯಂ ಸೇವಾ ಸಂಸ್ಥೆಗಳ ಒಕ್ಕೂಟ)

ಹಿಂದುಳಿದ ವರ್ಗ ಹಾಗೂ ಅಲ್ಪಸಂಖ್ಯಾತರ ಅಭಿವೃದ್ಧಿ ಗಾಗಿ ಯೋಜನೆ

ಶೈಕ್ಷಣಿಕವಾಗಿ ಮತ್ತು ಆರ್ಥಿಕವಾಗಿ ಹಿಂದುಳಿದು ಸಾಮಾಜಿಕವಾಗಿ ಶೋಷಿತರಾದವರ ಅಭಿವೃದ್ಧಿಗಾಗಿ ವಿಶೇಷ ಒತ್ತು ಕೊಟ್ಟು ಅವರಿಗೆ ಸಾಮಾಜಿಕ ನ್ಯಾಯ ಒದಗಿಸಿದಲ್ಲಿ ಮಾತ್ರ ಧ್ಯೇಯ ಈಡೇರಿಕೆಗೆ ಕಾರಣವಾಗುದು. ದೂರದೃಷ್ಟಿ ನಾಯಕ ಶ್ರೀ ಎಸ್. ಎಂ. ಕೃಷ್ಣ ಅವರ ನೇತೃತ್ವದ ಪ್ರಸಕ್ತ ಸರ್ಕಾರದ ಮಹೋದ್ದೇಶವೇ ಇದು. ಈ ದಿಸೆಯಲ್ಲಿ ಸರ್ಕಾರ ಹಿಂದುಳಿದವರ, ಅಲ್ಪಸಂಖ್ಯಾತರ, ದೀನದಲಿತರ ಹಾಗೂ ಶೋಷಿತರ ಕಲ್ಯಾಣಕ್ಕಾಗಿ ನೂತನ ಕಾರ್ಯಕ್ರಮಗಳನ್ನು ರೂಪಿಸಿ, ಅನುಷ್ಠಾನಗೊಳಿಸುವ ಮೂಲಕ ಅವರಲ್ಲಿ ಹೊಸ ಆಶಾಕಿರಣವನ್ನೇ ಮೂಡಿಸಿದೆ.

ಸಮಾಜ ಕಲ್ಯಾಣ ಇಲಾಖೆ

ಹಿಂದುಳಿದ ವರ್ಗಗಳ ಅಭಿವೃದ್ಧಿ:-

ಇಲಾಖೆಯ ವಿವಿಧ ಕಾರ್ಯಕ್ರಮಗಳ ಅನುಷ್ಠಾನದ ಮೂಲಕ 6,10,733 ಫಲಾನುಭವಿಗಳಿಗೆ ರೂ. 86 ಕೋಟಿ ನೆರವು. ಪ್ರಸಕ್ತ ಸಾಲಿನಲ್ಲಿ ಇಲಾಖೆಯ ಕಾರ್ಯ್ರಮಗಳ ಅನುಷ್ಠಾನಕ್ಕಾಗಿ ರೂ. 108.07 ಕೋಟಿ ಅನುದಾನ. 20 ಮೆಟ್ರಿಕ್ ನಂತರದ ಬಾಲಕಿಯರ ವಿದ್ಯಾರ್ಥಿನಿಲಯಗಳು ಹಾಗೂ ಒಂದು ಮೆಟ್ರಿಕ್ ನಂತರದ ಬಾಲಕರ ವಿದ್ಯಾರ್ಥಿ ನಿಲಯಕ್ಕೆ ಮಂಜೂರು. ಒಟ್ಟು ಸಾಮರ್ಥ್ಯ 1,050 ವಿದ್ಯಾರ್ಥಿಗಳು. ಒಟ್ಟು ರೂ. 585.49 ಲಕ್ಷಗಳ ವೆಚ್ಚದಲ್ಲಿ 40 ಮೆಟ್ರಿಕ್ - ಪೂರ್ವ ಹಾಗೂ ಮೆಟ್ರಿಕ್ ನಂತರ ವಿದ್ಯಾರ್ಥಿನಿಲಯಗಳ ಕಟ್ಟಡ ನಿರ್ಮಾಣ ಪೂರ್ಣ. 2,55,769 ಮೆಟ್ರಿಕ್ ನಂತರದ ವಿದ್ಯಾರ್ಥಿಗಳಿಗೆ ರೂ. 257.07 ಲಕ್ಷ ವಿದ್ಯಾರ್ಥಿ ವೇತನ ವಿತರಣೆ. ರೂ. 532,37 ಲಕ್ಷಗಳ ಮೌಲ್ಯದ 1,67,340 ವಿದ್ಯಾರ್ಥಿಗಳಿಗೆ ಶುಲ್ಕ ವಿನಾಯಿತಿ ಸೌಲಭ್ಯ. ಮಾಂಗಲ್ಯ ಭಾಗ್ಯ ಯೋಜನೆಯಡಿಯಲ್ಲಿ ರೂ. 22.10 ಲಕ್ಷಗಳ ವೆಚ್ಚದಲ್ಲಿ 442 ಫಲಾನುಭವಿಗಳಿಗೆ ಆರ್ಥಿಕ ಸಹಾಯ. 15,296 ಫಲಾನುಭವಿಗಳಿಗೆ ಕರ್ನಾಟಕ ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದ ಮೂಲಕ ರೂ. 2,119. 17 ಲಕ್ಷ ಆರ್ಥಿಕ ನೆರವು.

ಅಲ್ಪ ಸಂಖ್ಯಾತರ ಅಭಿವೃದ್ಧಿ:-

ಅಲ್ಪಸಂಖ್ಯಾತರ ಅಭಿವೃದ್ಧಿಗಾಗಿಯೇ ಪ್ರತ್ಯೇಕ ಇಲಾಖೆ 1999-2000ನೇ ಸಾಲಿನಿಂದ ಕಾರ್ಯಾರಂಭ. ಪ್ರಸಕ್ತ ಸಾಲಿನಲ್ಲಿ ಈ ಇಲಾಕೆಯ ಕಾರ್ಯಕ್ರಮಗಳ ಜಾರಿಗಾಗಿ ರೂ. 263.40 ಲಕ್ಷ ಅನುದಾನ ಬಿಡುಗಡೆ. ಶಿವಮೊಗ್ಗ, ಬಳ್ಳಾರಿ, ಹುಬ್ಬಳ್ಳಿ ಮತ್ತು ಬೆಳಗಾಂ ನಗರಗಳಲ್ಲಿ ಮೊರಾರ್ಜಿದೇಸಾಯಿ ವಸತಿಶಾಲೆಗಳ ಪ್ರಾರಂಭ. ವಿದ್ಯಾರ್ಥಿಗಳಿಗೆ ಉಚಿತ ಶಿಕ್ಷಣ, ಊಟ ಮತ್ತು ವಸತಿ ಸೌಲಭ್ಯಗಳಿಗಾಗಿ ರೂ. 60.00ಲಕ್ಷಗಳ ವೆಚ್ಚ. ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯರಿಗಾಗಿ ಬೆಂಗಳೂರು, ಮೈಸೂರು, ಧಾರವಾಢ, ಮಂಗಳೂರು ಮತ್ತು ಗುಲ್ಬರ್ಗಾ ನಗರಗಳಲ್ಲಿ 5 ವಿದ್ಯಾರ್ಥಿನಿಲಯಗಳ ಸ್ಥಾಪನೆ. ಸಾಂಸ್ಕೃತಿಕ ಹಾಗೂ ಸಾಮಾಜಿಕ ಚಟುವಟಿಕೆಗಳಿಗಾಗಿ ಸಮುದಾಯ ಭವನಗಳ ನಿರ್ಮಾಣಕ್ಕಾಗಿ ಅಲ್ಪಸಂಖ್ಯಾತ ಸ್ವಯಂಸೇವಾ ಸಂಸ್ಥೆಗಳಿಗೆ ಗರಿಷ್ಠ ರೂ. 5 ಲಕ್ಷ ಅನುದಾನ. ಈ ಉದ್ದೇಶಕ್ಕಾಗಿ ರೂ. 50 ಲಕ್ಷ ಮೀಸಲು. ಅಲ್ಪಸಂಖ್ಯಾತರ ವರ್ಗಗಳಿಗೆ ಸೇರಿದ ಐ.ಟಿ.ಐ/ಡಿಪ್ಲೋಮಾ ತರಗತಿಗಳ 840ಕ್ಕೂ ಹೆಚ್ಚಿನ ವಿದ್ಯಾರ್ಥಿಗಳಿಗೆ ರೂ. 9.25 ಲಕ್ಷ ಶಿಷ್ಯವೇತನ. 52 ಕಾನೂನು ಪದವೀಧರರಿಗೆ ನ್ಯಾಯಾಂಗ ಆಡಳಿತದಲ್ಲಿ ತರಬೇತಿ. ರೂ. 1,536.42 ಲಕ್ಷಗಳ ವೆಚ್ಚದಲ್ಲಿ 12,047 ಫಲಾನುಭವಿಗಳಿಗೆ ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದ ಮೂಲಕ ನೆರವು.

ಸಾಧಿಸಿದ್ದು ಬಹಳಷ್ಟು, ಸಾಧಿಸಬೇಕಾಗಿರುವುದು ಇನ್ನೂ ಬಹಳಷ್ಟು.

ಕರ್ನಾಟಕ ವಾರ್ತೆ

ಪೋಷಕರೇ! ಎಚ್ಚರವಾಗಿರಿ!!

ಇವತ್ತು ಒಂದೇ ಸೂರಿನ ಕೆಳಗೆ ಬೆಳೆಯುತ್ತಿರುವ ಗಂಡು ಮತ್ತು ಹೆಣ್ಣುಗಳು ವಿಭಿನ್ನ ಸಂಸ್ಕೃತಿಯನ್ನು ಅಳವಡಿಸಿಕೊಳ್ಳುತ್ತಿದ್ದಾರೆ ಎನ್ನುವ ಸತ್ಯ ನಿಮಗೆ ತಿಳಿದಿದೆಯೇ? ಇದಕ್ಕೆ ಟಿ.. ವಿ. ಪೆಟ್ಟಿಗೆ ತನ್ನ ಸಿಂಹ ಪಾಲನ್ನು ದೇಣಿಗೆಯಾಗಿ ನೀಡುತ್ತಿದೆ. ಹನ್ನೆರಡು ವರ್ಷಗಳಿಂದ ಬೇಸಿಗೆ ಶಿಬಿರ ನಡೆಸುತ್ತಿರುವ ಅನುಭವದ ಮೇಲೆ ಹಾಗೂ ಪ್ರತಿವರ್ಷ ಬರುವ ಮಕ್ಕಳನ್ನು ಸೂಕ್ಷ್ಮವಾಗಿ ಗಮನಿಸುತ್ತಿರುವ ಆಧಾರದ ಮೇಲೆ ಈ ಮಾತುಗಳನ್ನು ಹೇಳಬಯಸುತ್ತೇನೆ.

ಗಂಡು ಏನೇ ಮಾಡಿದರೂ ಸರಿ. ಚೆನ್ನ ಎಂದು ನಮ್ಮ ಸಿನಿಮಾಗಳೂ, ಟಿ. ವಿ. ಸೀರಿಯಲ್‌ಗಳೂ, ಜಾಹೀರಾತುಗಳೂ ಸಂದೇಶವನ್ನು ಸಾರುತ್ತವೆ. ಇದರ ಪರಿಣಾಮವೆಂದರೆ, ನಾಚಿಕೆ ಬಿಟ್ಟ, ಕ್ರೌರ್ಯವನ್ನು ರಾಜಾರೋಷವಾಗಿ ಪ್ರದರ್ಶಿಸುವ ಗುಣ ನಮ್ಮ ಗಂಡು ಮಕ್ಕಳಲ್ಲಿ ಬೆಳೆಯುತ್ತಿದೆ. ಧೈರ್ಯ ಅಥವಾ ಶೌರ್ಯ ಎನ್ನುವ ಹೆಸರಿನಲ್ಲಿ ಕ್ರೌರ್ಯವನ್ನೇ ಪಾಠ ಹೇಳುತ್ತಿವೆ, ಈ ಮಾಧ್ಯಮಗಳು. ಇದರ ಅರಿವು ನಮ್ಮ ಪಾಲಕರಿಗೆಷ್ಟು ಆಗುತ್ತಿದೆ ಎನ್ನುವುದು ಈಗ ಕೇಳಬೇಕಾದ ಪ್ರಶ್ನೆ.

ಏಳನೇ ತರಗತಿಯ ಹುಡುಗನೊಬ್ಬ ಗೆಳೆಯರ ಮುಂದೆ 'ತನ್ನ ಇಷ್ಟದ ಕೆಲಸವೆಂದರೆ ತನ್ನ ಕ್ಲಾಸ್ ಟೀಚರ್‌ರನ್ನು ಕೊಲ್ಲುವುದು' ಎಂದು ಘೋಷಿಸುತ್ತಾನೆ. ಅವನ ಗೆಳೆಯರು ಚಪ್ಪಾಳೆ ತಟ್ಟಿ ಸ್ವಾಗತಿಸುತ್ತಾರೆ. ಏಳನೇ ತರಗತಿಯ ಹುಡುಗಿಯರು ತಮ್ಮ ಟೀಚರ್‌ಗಳಿಗೆ ಪರ್ಸು, ಉಂಗುರ ಮುಂತಾದವನ್ನು ಉಡುಗೊರೆ ಕೊಟ್ಟರೆ ಹುಡುಗರು ಒಂದು 'ಕತ್ತರಿ' ಪ್ರೆಸೆಂಟ್ ಮಾಡಿ ಅದರ ಜೊತೆ ಚಿಕ್ಕ ಚೀಟಿ ಇಡುತ್ತಾರೆ. 'ನಮ್ಮ ಆಸೆಗಳನ್ನು ಕತ್ತರಿಸಿದ್ದಕ್ಕೆ ನಿಮಗೆ ಇದೋ ಕತ್ತರಿ ಬಹುಮಾನ' ಬಹುಮಾನ ಶಿಬಿರಕ್ಕೆ ಬಂದ ಹುಡುಗರ ಸೂಟ್‌ಕೇಸಿನ ತಳದಲ್ಲಿ ಚಾಕುಗಳು ಮತ್ತು ಚಿಕ್ಕ ಗೋಲಿ ಇರಿಸಿ ಹೊಡೆಯ ಬಹುದಾದ ಪಿಸ್ತೂಲುಗಳು ಸಿಕ್ಕವು ಎಂದರೆ ಈ ಕ್ರೌರ್ಯದ ರುಚಿ ಬಾಲ್ಯಕ್ಕೆ ಹೇಗೆ ತಟ್ಟಿದೆ ಎಂದು ಊಹಿಸಬಹುದು. ವಸತಿ ಶಿಬಿರದಲ್ಲಿ ಪ್ರತಿವರ್ಷ ಹುಡುಗರಿಂದ ಉಂಟಾಗುವ ಸಮಸ್ಯೆ ಹೆಚ್ಚುತ್ತಲೇ ಇದೆ. ಕಿಡಿಗೇಡಿತನ ಹುಡುಗರಿಗೆ ಮನರಂಜನೆಯಾಗಿ ತೋರುತ್ತದೆ. ಒಬ್ಬರನ್ನೊಬ್ಬರು ಗೋಳಾಡಿಸುವುದು ಶಿಬಿರದ ದೊಡ್ಡ ಸಮಸ್ಯೆಯಾಗಿ ಕಾಡುತ್ತಿದೆ.

ಪೋಷಕರಿಗೆ ಗೊತ್ತಿಲ್ಲದ ಅಥವಾ ಅವಜ್ಞೆಗೆ ಒಳಗಾದ ಇನ್ನೊಂದು ವಿಷಯವಿದೆ. ನಿಮ್ಮ ಮನೆಯ ಮೂಲೆಯ ಪೆಟ್ಟಿಗೆ ನಿಮ್ಮ ಗಂಡು ಮಕ್ಕಳನ್ನು ಹರೆಯಕ್ಕೆ ಮುನ್ನವೇ 'ಕಾಮ'ಕ್ಕೆ ತೆರೆಸುತ್ತಿದೆ ಎನ್ನುವುದು ನೀವು ಗಮನಿಸಿರದ ಸಂಗತಿಯಾಗಿರಬಹುದು. ಪ್ರಿಂಟೆಡ್ ಆಟೋಗ್ರಾಫ್ ಪುಸ್ತಕದಲ್ಲಿ 'ನಿಮ್ಮ ಮೆಚ್ಚಿನ ಕ್ಷಣಗಳ್ಯಾವುದು' ಎನ್ನುವ ಕಾಲಂನಲ್ಲಿ 'ನನ್ನ ಗೆಳತಿಯನ್ನು ದೀರ್ಘವಾಗಿ ಚುಂಬಿಸಿದಾಗ' ಎಂದು ಬರೆದ ಒಂದು ಹುಡುಗ. ಇದು ಹದಿ ಹರೆಯದ ಅಥವಾ ನವಯುವಕನ ಮಾತಲ್ಲ, ಕೇವಲ ಏಳನೇ ತರಗತಿ ಓದುತ್ತಿರುವ 11 ಅಥವಾ 12ನೇ ವಯಸ್ಸಿನ ಪೋರನ ಮಾತಿದು! ನಿಮ್ಮ ಗಂಡು ಮಕ್ಕಳು ಉಚಿತ ಸಮಯಕ್ಕೆ ಮೊದಲೇ ತರಾತುರಿಯಿಂದ ಅರಳುತ್ತಿದ್ದಾರೆ. ಇದು ಅನಾರೋಗ್ಯಕರ ಬೆಳವಣಿಗೆ. ಕಾಯಿಕಿತ್ತು ಪುಡಿ ಹಾಕಿ ಹಣ್ಣು ಮಾಡಿ ತಿಂದಾಗ ದೊರಕುವ ಅರುಚಿಯ ಅನುಭವವಿದು. 'ಇಂಥ ಮಕ್ಕಳು ಮುಂದೆ ದೊಡ್ಡವರಾದಾಗ ಅನೇಕ ಸಮಸ್ಯೆಗಳಿಗೆ ಗುರಿಯಾಗುತ್ತಾರೆ, ವಿಕೃತ ಕಾಮ, ಆತುರಕಾಮ, ಅತೃಪ್ತಕಾಮ ಇಂಥವಕ್ಕೆ ಬಲಿಯಾಗಿ ತಾವೂ ಸುಖವಾಗಿರದೇ ತಮ್ಮ ಅರ್ಧಾಂಗಿಯನ್ನು ಸುಖವಾಗಿರಲು ಬಿಡದೇ ತೊಳಲುತ್ತಾರೆ' ಎಂದು ಮನಃಶಾಸ್ತ್ರ ಹೇಳುತ್ತದೆ.

ಇದಕ್ಕೆ ತದ್ವಿರುದ್ಧವಾಗಿ ಹುಡುಗಿಯರು ಬೆಳೆಯುತ್ತಿದ್ದಾರೆ. ಹುಡುಗಿಯರೂ ಟಿ. ವಿ.ಗೆ ಬಲಿಯಾಗಿದ್ದಾರೆ ಆದರೆ ಅದರಿಂದ ಅವರು ಗ್ರಹಿಸುವುದು ಬೇರೆಯೇ ಆಗಿದೆ. ಗಂಡುಗಳ ಕ್ರೌರ್ಯಕ್ಕೆ ಹೆಣ್ಣುಗಳ ಸಹನೆ ಉತ್ತರವಾಗುತ್ತದೆ. ಗಂಡುಗಳ ಆಟಾಟೋಪಕ್ಕೆ ಹೆಣ್ಣುಗಳ ತಿಳುವಳಿಕೆ ಉತ್ತರವಾಗುತ್ತದೆ. ಆದ್ದರಿಂದಲೇ ಇಂದು ಹೆಣ್ಣು ಮಕ್ಕಳಲ್ಲಿ ಚೆಲ್ಲುತನ ಪೆದ್ದುತನಗಳು ಮರೆಯಾಗಿ ವಯಸ್ಸಿಗೆ ಮೀರಿದ ಗಾಂಭೀರ್ಯ ಪ್ರೌಢತನ ಕಾಣುತ್ತಿದೆ. ಹೆಣ್ಣು ಮಕ್ಕಳು ತಾವು ಏನೇ ಕೆಲಸ ಮಾಡಿದರೂ ಅದಕ್ಕೆ ಸಂಪೂರ್ಣವಾಗಿ 'ಕಮಿಟ್' ಆಗುವ ಗುಣ ಬೆಳೆಸಿಕೊಳ್ಳುತ್ತಿದ್ದಾರೆ. ಆದ್ದರಿಂದಲೇ ಎಸ್. ಎಸ್. ಎಲ್. ಸಿ ಮತ್ತು ಪಿ. ಯು. ಸಿ. ಪರೀಕ್ಷೆಯ

ಫಲಿತಾಂಶಗಳಲ್ಲಿ ಹುಡುಗಿಯರದೇ ಮೇಲುಗೈಯಾಗಿರುತ್ತದೆ. ಇದಕ್ಕೆ ಹುಡುಗರು ಸಲೀಸಾಗಿ .'ಹುಡುಗಿಯರು ಕುಡುಮಿಗಳು ಅದಕ್ಕೆ ಮೇಲುಗೈ ಸಾಧಿಸುತ್ತಾರೆ! ಕಾರಣ ಹುಡುಕಿ, ತಮ್ಮ ಅಸಫಲತೆಯನ್ನು ಮುಚ್ಚಿ ಹಾಕುತ್ತಾರೆ' ನಿಜವಾದ ಕಾರಣ ಹುಡುಗರ ಬೇಜವಾಬ್ದಾರಿಯ ನಡವಳಿಕೆ ಮತ್ತು ಛಿದ್ರಗೊಂಡ ಏಕಾಗ್ರತೆ!!

'ಕ್ರಿಕೆಟ್ ಗಂಡು ಮಕ್ಕಳನ್ನು ವಿಪರೀತ ದಾರಿ ತಪ್ಪಿಸುತ್ತಿದೆ' ಎನ್ನುವ ಸತ್ಯ ಅನೇಕ ಪೋಷಕರಿಗೆ ಮಾನ್ಯವಾಗಿಲ್ಲ. ನಮ್ಮ ಶಿಬಿರದಲ್ಲಿ ಬೆಳಿಗ್ಗೆ ಎದ್ದು ನಿತ್ಯ ಕರ್ಮ ಮುಗಿಸಿ ತಕ್ಷಣ ಗಂಡು ಹುಡುಗರು ಹೊರಡುತ್ತಿದುದು ಕ್ರಿಕೆಟ್ ಆಟಕ್ಕೆ! ಹಗಲೂ ರಾತ್ರೀ ಈ ಆಟದ ಚಟ ಹುಡುಗರ ತಲೆಯನ್ನು ಹೊಕ್ಕು ಏಕಾಗ್ರತೆಗೆ ಭಂಗ ತರುತ್ತದೆ. ಕೋಟಿ ಕೋಟಿ ಜನಕ್ಕೆ ಒಬ್ಬ ತೆಂಡೂಲ್ಕರ್ ಬರುವುದು ಸಾಧ್ಯ ಎಂಬ ಸತ್ಯ ಗೊತ್ತಿದ್ದರೂ, ಎಲ್ಲ ಗಂಡು ಮಕ್ಕಳೂ ತಾವು ಮರಿತಂಡೂಲ್ಕರ್ ಎಂಬ ಭ್ರಮೆಯಲ್ಲಿ ಬದುಕುತ್ತಾರೆ. 'ಔಟಾದರೂ ಆಗಲಿಲ್ಲವೆಂದು ಸಾಧಿಸುವುದು' ಬೌಲ್ ಮಾಡುವಾಗ ಬ್ಯಾಟ್- ಹಿಡಿದವನ ತಲೆಗೇ ಗುರಿ ಇಟ್ಟು ಬೌನ್ಸರ್ ಎಸೆಯುವುದು. ರಸ್ತೆಯಲ್ಲಿ ಆಡುವಾಗ ಅಕ್ಕ ಪಕ್ಕದ ಮನೆಯ ಕಿಟಕಿ ಗಾಜು ಒಡೆದು ಅವರು ಹೊರಬರುವ ವೇಳೆಗೆ ಬಚ್ಚಿಟ್ಟುಕೊಂಡು, ಕುಚೋದ್ಯದ ನಗೆ ನಗುವುದು. ಇವು ಕ್ರಿಕೆಟ್ ಆಡುವವರ ಸಾಮಾನ್ಯ ನಡವಳಿಕೆಗಳು, ಈ ನಡವಳಿಕೆಗಳೇ ಮುಂದೆ ಕ್ರೌರ್ಯ ವಂಚನೆಗಳನ್ನು ಬೇರೂರಿಸುತ್ತದೆ ಎನ್ನುವ ಸತ್ಯ ಸ್ವತಃ ಹುಡುಗರಿಗೂ ಗೊತ್ತಾಗುವುದಿಲ್ಲ. ಹುಡುಗಿಯರಿಗೆ ಕ್ರಿಕೆಟ್ ಒಲಿಯದಿರುವುದು, ನಿಜವಾಗಿ ದೇಶದ ದೃಷ್ಟಿಯಿಂದು ತುಂಬಾ ಕ್ಷೇಮಕರವಾದ ಸಮಾಚಾರ. ಮಕ್ಕಳು ಗಂಡಾಗಲೀ ಹೆಣ್ಣಾಗಲೀ ಹುಟ್ಟುವಾಗ ಯಾರೂ ಕೆಟ್ಟವರಾಗಿರುವುದಿಲ್ಲ ಎನ್ನುವ ಸತ್ಯ ಎಲ್ಲರಿಗೂ ತಿಳಿದದ್ದೇ. ಪರಿಸರ ವ್ಯಕ್ತಿಯ ಸ್ವಭಾವವನ್ನು ನಿರ್ಮಿಸುತ್ತದೆ. ಇಂದಿನ ಪರಿಸರ ಗಂಡು ಮಕ್ಕಳಿಗೆ ನಿಜವಾಗಿಯೂ ಹಿತಕರವಾಗಿಲ್ಲ ಎನ್ನುವುದನ್ನು ಪೋಷಕರು ಅಗತ್ಯವಾಗಿ ಗಮನಿಸಬೇಕಾಗಿದೆ.

- *ಶಾಂತಾಸಾಗರಾಜ್*

ಪೋಷಕರ ಗಮನಕ್ಕೆ

1. ನಿಮ್ಮ ಮಗ ಶಾಲೆ ಮತ್ತು ಮನೆ ಬಿಟ್ಟು ಹೊರಗೆ ಎಷ್ಟು ಸಮಯ ಕಳೆಯುತ್ತಾನೆ ಎನ್ನುವುದನ್ನು ಪ್ರತಿನಿತ್ಯ ಗಮನಿಸಿ.
2. ನಿಮ್ಮ ಮಗನ ಗೆಳೆಯರ್ಯಾರ್ಯಾರು ಅವರ ಆರ್ಥಿಕ ನೆಲೆಗಳೇನು ಎನ್ನುವುದನ್ನು ತಪ್ಪದೇ ತಿಳಿದು, ನಿಮಗಿಂತ ಹೆಚ್ಚು ಶ್ರೀಮಂತ ಮಕ್ಕಳ ಗೆಳೆತನವನ್ನೂ ತಪ್ಪಿಸುವುದೊಳ್ಳೆಯದು. ಸಮಾನ ನೆಲೆಯಲ್ಲಿದ್ದರೆ ಕ್ಷೇಮ.
3. ನಿಮ್ಮ ಮಗ ಕ್ರಿಕೆಟ್ ಪ್ರೇಮಿ ಆಗಿದ್ದರೆ ಆತನ ಆಟದ ವಿವರಗಳನ್ನು ಮಗನೆದರು ಮೋಹ ಬಿಟ್ಟು ವಿಶ್ಲೇಷಿಸುವುದು ಒಳ್ಳೆಯದು.
4. ಗಂಡು ಮಕ್ಕಳಿಗೆ ಒಳ್ಳೆಯ ಓದಿನ ಅಭಿರುಚಿ ಬೆಳೆಸುವುದು ಪೋಷಕರ ಆದ್ಯ ಕರ್ತವ್ಯ. ಮಾತೃಭಾಷೆಯ ಒಲುಮೆ. ಕಾವ್ಯದ ಸೌಂದರ್ಯ ಇವು ತಿಳಿದ ವ್ಯಕ್ತಿ ಸದಭಿರುಚಿಯವನಾಗುತ್ತಾನೆ ಎಂದು ಮನಃಶಾಸ್ತ್ರ ಹೇಳುತ್ತದೆ.
5. ಗಂಡು ಮಕ್ಕಳನ್ನೂ ಗೆಳೆಯರಂತೆ ಬೆಳೆಸಬೇಕು. ಅವರ ಮನಸ್ಸಿನ ಓಘಗಳನ್ನೂ ಸರಿಯಾಗಿ ಅರಿಯಬೇಕು. ಸ್ತ್ರೀಪರ ದೃಷ್ಟಿಗಳನ್ನೂ ಆರೋಗ್ಯಕರವಾಗಿಸಬೇಕು. ತಾಯಿಯ ಬಗ್ಗೆ ಪ್ರೀತಿ ಅಷ್ಟೇ ಅಲ್ಲ ತಂದೆಗೆ ಕೊಡುವಷ್ಟೇ ಗೌರವವನ್ನೂ ಕೊಡುವಂತೆ ಬೆಳೆಸಬೇಕು. ಆಗ ಮಾತ್ರ ಇಂಥ ಮಕ್ಕಳು ಮುಂದೆ ಮಹಿಳೆಯರ ಬಗ್ಗೆ ಗೌರವಯುತವಾಗಿ ನಡೆದುಕೊಳ್ಳುತ್ತಾರೆ ಮತ್ತು ಆರೋಗ್ಯಕರ ಮನಸ್ಸಿನವರಾಗುತ್ತಾರೆ.
6. ಇಂದು ಹೆಣ್ಣು ಮಕ್ಕಳಿಗಿಂತ ಗಂಡನ್ನು ಬೆಳೆಸುವುದು ಹೆಚ್ಚು ಛಾಲೆಂಜಿಂಗ್ ಎನ್ನುವ ಸತ್ಯ ಪೋಷಕರು ಅರಿಯುವುದೊಳ್ಳೆಯದು.

★ ★ ★

ಇದು ನಿಮಗೆ ಗೊತ್ತೆ

1. 1996ರಲ್ಲಿ ಬೆಂಗಳೂರಿನಲ್ಲಿ ಸೌಂದರ್ಯ ಸ್ಪರ್ಧೆ ಏರ್ಪಡಿಸುವ ಜವಾಬ್ದಾರಿ ತೆಗೆದುಕೊಂಡ ಅಮಿತಾಭ್ ಬಚ್ಚನ್ನನ ಎಬಿಸಿಎಲ್ ಸಂಸ್ಥೆ ಗಣನೀಯವಾಗಿ ಆರ್ಥಿಕ ನಷ್ಟ ಅನುಭವಿಸಿತು. ಅದಕ್ಕೆ ಕಾರಣ ವಿದ್ಯಾರ್ಥಿಗಳು, ಮಹಿಳಾ ಸಂಘಟನೆಗಳು, ರೈತ ಸಂಘ ಮತ್ತು ಇತರ ಸಾಮಾಜಿಕ ಸಂಘ ಸಂಸ್ಥೆಗಳು ನಡೆಸಿದ ವಿರೋಧಗಳು. ಇದರಿಂದಾಗಿ ಟಿಕೆಟ್ಟುಗಳು ಹೆಚ್ಚಿನ ಸಂಖ್ಯೆಯಲ್ಲಿ ಮಾರಾಟವಾಗಲಿಲ್ಲ. ಪ್ರಾಯೋಜಕರು ಇದಕ್ಕೆ ಹಣ ತೊಡಗಿಸಲು ಹೆದರಿಕೊಂಡರು. ಕೆಲವು ಸ್ಪರ್ಧೆಗಳನ್ನು ಇದ್ದಕ್ಕಿದ್ದಂತೆ ಸ್ಥಳಾಂತರಿಸ ಬೇಕಾಗಿ ಅದರ ಖರ್ಚು ದುಪ್ಪಟ್ಟಾಯಿತು. ''ಮಹಾ ನೀವು ವಿರೋಧಿಸಿದ್ದರಿಂದ ಏನಾಗುತ್ತದೆ ಸೌಂದರ್ಯ ಸ್ಪರ್ಧೆ ನಡೆದೇನಡೆಯಿತಲ್ಲ''! ಎಂದು ಮೂಗು ಮುರಿದವರಿಗೆ ಇಲ್ಲಿದೆ ಸರಿಯಾದ ಉತ್ತರ. ಅಮಿತಾಭ್ ಬಚ್ಚನ್ ಆರ್ಥಿಕವಾಗಿ ಮುಗ್ಗರಿಸಿದ್ದಷ್ಟೇ ಅಲ್ಲ, ಮುಂದಿನ ವರ್ಷಗಳಿಗೆ ಅಂದರೆ 1997 ಮತ್ತು 1998ರ ಸ್ಪರ್ಧೆಯ ಕಾಂಟ್ರ್ಯಾಕ್ಟ್ ಸಹ ಎಬಿಸಿಎಲ್ ಸಂಸ್ಥೆಗೆ ಮೊದಲಕ್ಕಿದ್ದು ನಂತರ ಕ್ಯಾನ್ಸಲ್ ಆಯಿತು. ಜೊತೆಗೆ ಮಕ್ಕಳ ಸ್ಪಾಸ್ಟಿಕ್ ಸೊಸೈಟಿಗೆ ಕೊಡುತ್ತೇನೆಂದು ಘೋಷಿಸಿದ ಹಣ ಕೊಡಲಾಗದೇ ಸುದ್ದಿ ಮಾಧ್ಯಮದವರಿಂದ ಅವಮಾನಕ್ಕೆ ಈಡಾಗ ಬೇಕಾಯಿತು.

2. ಈಗ ಬುದ್ಧಿ ಬಂತೇ?

ಐದು ದಶಕಗಳ ಕಾಲ ವಿಶ್ವಸುಂದರಿ ಸ್ಪರ್ಧೆ ಏರ್ಪಡಿಸುತ್ತಿದ್ದ ಮೋರ್ಲಿ ದಂಪತಿಗಳಲ್ಲಿ ಶ್ರೀ ಎರಿಕ್ ಮೋರ್ಲಿ ಕಳೆದ ನವೆಂಬರ್‌ನಲ್ಲಿ ನಿಧನರಾದನಂತರ ಆತನ ಪತ್ನಿ ಶ್ರೀಮತಿ ಜೂಲಿಯಾ ಮೋರ್ಲಿ ವಿಶ್ವಸುಂದರಿ ಸ್ಪರ್ಧೆಯನ್ನು 'ಮೂರ್ಖತನ ಮತ್ತು ಭಯನಾಕ' ಎಂದು ವರ್ಣಿಸಿದ್ದಾರೆ. ಐದೂ ದಶಕಗಳಲ್ಲೂ ಪತಿಗೆ ಸಹಾಯಕಿಯಾದ ಈಕೆಗೆ ಪತಿಯ ಮರಣದ ನಂತರ ಇದ್ದಕ್ಕಿದ್ದಂತೆ ಸ್ತ್ರೀಪರ ಕಾಳಜಿಗಳು ಗೋಚರಿಸಲಾರಂಭಿಸಿವೆ ಎಂದು ಲಂಡನ್‌ನ 'ದಿ ಅಬ್ಸರ್‌ವರ್' ಪತ್ರಿಕೆ ತನ್ನ ಸಂದರ್ಶನದಲ್ಲಿ ಪ್ರಕಟಿಸಿದೆ. ಜೂಲಿಯಾರ ಅಭಿಪ್ರಾಯಗಳು ಹೀಗೆ ಮುಂದುವರೆಯುತ್ತವೆ ''ಹುಡುಗಿಯರು ರಂಗ ಮುಂತಾದ ಮೇಲೆ ಸುತ್ತುತ್ತಿರುವುದನ್ನು ಒಬ್ಬ ಮಹಿಳೆಯಾಗಿ ನೋಡಿದ ನನಗೆ ಅದು ತೀರಾ ಕೃತ್ರಿಮ ಮತ್ತು ಅಸಹನೀಯ ಎನಿಸಿತು. ಈಜುಡುಗೆಯನ್ನು ತೊಟ್ಟ ಯುವತಿಯರು ವೇದಿಕೆಯ ಮೇಲೆ ಬಂದಾಗ ನನಗೆ ಕಸವಿಸಿಯಾಯಿತು. ಹುಡುಗಿಯರು ಹೆಚ್ಚು ಕಡಿಮೆ ನಗ್ನರಾಗಿ ವೇದಿಕೆಯ ಮೇಲೆ ಇರುವಾಗ ಕಾರ್ಯಕ್ರಮದ ನಿರೂಪಕ ಮೈಖೇಲ್ ಆಸ್ಪೆಲ್ 'ನೀವು ಬೆಳಗಿನ ಉಪಹಾರದಲ್ಲಿ ಏನೂ ತಿಂದಿರಿ?' ಎಂದು ಕೇಳುವುದು ಎಂಥ ಮೂರ್ಖತನ! ನನಗಂತೂ ಇದನ್ನು ನೋಡುವುದು ಅತ್ಯಂತ ಘೋರ ಎನ್ನಿಸಿತು''. ಇಷ್ಟೆಲ್ಲ ಪ್ರಾಮಾಣಿಕವಾಗಿ ಒಪ್ಪಿಕೊಂಡಿರುವ ಜೂಲಿಯಾ ಸೌಂದರ್ಯ ಸ್ಪರ್ಧೆಯನ್ನು ನಿಲ್ಲಿಸುತ್ತಾರೆಯೇ? ಖಂಡಿತಾ ಇಲ್ಲ. ಏಕೆಂದರೆ ಇದು ಹಣದ ಮೂಲ ಎನ್ನುವ ಜಾಣತನ ಆಕೆಗೆ ಇದೆ. ''ಇನ್ನೂ ಮುಂದೆ ಈ ಸ್ಪರ್ಧೆಯನ್ನು ಹೊಸರೀತಿಯಲ್ಲಿ, ಹೊಸ ವಿನ್ಯಾಸದಲ್ಲಿ ನಾವು ರೂಪಿಸುತ್ತೇವೆ, ಸಕಾರಾತ್ಮಕ ಪ್ರಯತ್ನ ಮಾಡಲಾಗುವುದು'' ಎಂದು ಹೇಳಿರುವ ಈಕೆ ಮುಂದಿನದು 'ಸದುದ್ದೇಶ ಸೌಂದರ್ಯ ಸ್ಪರ್ಧೆ' ಎಂದು ಕರೆದು ಕೊಂಡಿದ್ದಾರೆ ಆದರೆ ಈ ಪಾಶ್ಚಾತ್ಯ ಮಹಿಳೆಯರು ಸಾಂಸ್ಕೃತಿಕ ಪ್ರಜ್ಞೆ ಎಂಥದ್ದು ಎಂದರೆ ಟಿ. ವಿ. ಛಾನಲ್‌ಗಳಿಂದ ಬರುವ ಹಣದ ಹೊಳೆಯ ಮುಂದೆ ಮಿಕ್ಕಿದ್ದೆಲ್ಲ ಗೌಣವೇ. ''ಸ್ಪರ್ಧೆಯ ಪ್ರದರ್ಶನ ದೂರದರ್ಶನಕ್ಕೆ ಬೇಕಾದ ದಟ್ಟ ದೃಶ್ಯವನ್ನೂ ನೀಡುತ್ತದೆ'' ಎಂದೂ ಹೇಳಿರುವ ಈಕೆ ಯಾವ ಬಗೆಯ ಸ್ಪರ್ಧೆ ನಡೆಸುತ್ತಾರೋ ಕಾದು ನೋಡಬೇಕಷ್ಟೆ.

(ಇಷ್ಟೆಲ್ಲ ಅಬ್ಬರದ ಮಾತುಗಳನ್ನಾಡಿದರೂ ಈ ಬಾರಿಯ ಸೌಂದರ್ಯ ಸ್ಪರ್ಧೆಯು ಎಂದಿನ ಜಾಡಿನಲ್ಲಿಯೇ ನಡೆದದ್ದು ವಾಸ್ತವ ಸತ್ಯ!)

- ಶಾಂತಾನಾಗರಾಜ

ಅಂದು

'ಕಲ್ಲು' ಕೊಟ್ಟಮ್ಮಗೆ ಎಲ್ಲಾ ಭಾಗ್ಯವು ಬರಲಿ
ಪಲ್ಲಕ್ಕಿ ಮೇಲೆ ಮಗಬರಲಿ ಆ ಮನೆಗೆ
ಮಲ್ಲಿಗೆ ಮುಡಿಯೋ ಸೊಸೆ ಬರಲಿ
ವಿ.ಸೂ. ಇಲ್ಲಿ 'ಕಲ್ಲು' ಎಂದರೆ ಬೀಸುವ ಕಲ್ಲು, ಅದನ್ನು ಎರವಲು ಕೊಟ್ಟವರಿಗೆ ಹೀಗೆ ಹರಸಿದ್ದಾರೆ.

ಇಂದು

'ಮಿಕ್ಸಿ' ಕೊಟ್ಟಮ್ಮಗೆ ಎಲ್ಲಾ ಭಾಗ್ಯವು ಬರಲಿ
'ಮಾರುತಿ'ಯಲ್ಲಿ ಮಗ ಬರಲಿ ಆ ಮನೆಗೆ
ಕಂಪ್ಯೂಟರ್ ಕಲಿತಾ ಸೊಸೆ ಬರಲಿ

RNI No. 45577/88

CPMG/KA/BG-8/2001
Book-Post/News Letter

To :
Smt/Sri

"Achala" 108, Skyline Surabhi,
14-9, Vidyapeeta Road, BSK III Stage,
Bangalore - 560 085